ಜ್ಯೋತಿಕಾರ್ಯದ ವಾರ್ತಾಪತ್ರ



ಮಹರ್ಷಿ ಅಮರ (1919-1982)

# ತಪೋವಾಣಿ

ಸಂ. 8 ಸಂ. 2 ಫೆಬ್ರವರಿ 2011 ರೂ.15

## ಅನಿಸಿಕೆಗಳು

ಗುರೂಜಿ ಕೃಷ್ಣಾನಂದ

(ಅನು: ಶ್ಯಾಮಲಾದೇವಿ)

ಫೆಬ್ರವರಿ 1, 2011, ಅಮರರವರ ಜನ್ಮದಿನದಂದು, ಒಂದು ಲಕ್ಷಕ್ಕೂ ಹೆಚ್ಚು ಮಕ್ಕಳು ಬೆಳಕನ್ನು ಚಾನಲ್ ಮಾಡುತ್ತಿದ್ದಾರೆ.  ಆ ದಿನಕ್ಕೆ ಸರಿಯಾಗಿ, ಹನ್ನೆರಡು ಲಕ್ಷಕ್ಕೂ ಹೆಚ್ಚು ಶಾಲಾಮಕ್ಕಳು ಬೆಳಕನ್ನು ಚಾನಲ್ ಮಾಡಿರುತ್ತಾರೆ.  ಇದು ಒಂದು ಅದ್ಭುತವಾದ ಸಂಗತಿ. ಅದರಲ್ಲೂ, ಇದು ಮೀಡಿಯಾದಿಂದ ಯಾವ ಸಹಾಯವೂ ಇಲ್ಲದೆ, ಯಾವುದೇ ಪ್ರಚಾರವಿಲ್ಲದೆ ಆಗಿರುವ ಮಹತ್ಸಾಧನೆ.  ಶಾಲಾ ಅಧಿಕಾರಿಗಳು, ಈ ನಿಸ್ವಾರ್ಥ ಸೇವೆಯನ್ನು ಹೊಗಳಿದ್ದಾರೆ ಮತ್ತು ನಮಗೆ ಹೆಚ್ಚು ಸಹಾಯಮಾಡಿದ್ದಾರೆ. ಅವರು ಇದನ್ನು ಧಾರ್ಮಿಕವಲ್ಲದ, ರಾಜಕೀಯವಲ್ಲದ, ಸಂಪೂರ್ಣವಾದ ಆಧ್ಯಾತ್ಮಿಕ ಕಾರ್ಯ ಎಂದು ಗುರುತಿಸಿದ್ದಾರೆ. ಬೆಳಕು ಮಕ್ಕಳನ್ನು ಆಯ್ಕೆಮಾಡಿತು ಮತ್ತು ಅಧಿಕಾರಿಗಳು ಬೆಳಕನ್ನು ಆಯ್ಕೆಮಾಡಿದರು.

ಅಮರರವರಿಗೆ ಸಂತೋಷವಾಗಿದೆ. ಅವರ ಅನೇಕ ಕನಸುಗಳಲ್ಲಿ ಒಂದು ಕನಸು ಸಾಕಾರಗೊಳ್ಳುತ್ತಿದೆ. ಮಾಸ್ಟರ್ 'ವಿ' ಅವರಿಗೂ ಸಂತೋಷವಾಗಿದೆ. ಅವರು ಈ ಕಾರ್ಯದ ಮೇಲ್ವಿಚಾರಕರಾಗಿದ್ದಾರೆ.

ಎಲ್ಲೆಡೆ ಒಂದು ರೀತಿಯ ಜಾಗೃತಿ ಮೂಡಿದೆ ಎಂದು ನಾನು ಹೇಳುತ್ತಲೇ ಇದ್ದೇನೆ. ಇದು ಸತ್ಯ ಮತ್ತು ಮಕ್ಕಳಲ್ಲಿ, ಚಿಕ್ಕವಯಸ್ಸಿನವರಲ್ಲಿ ಇದು ಹೆಚ್ಚು ಇದೆ. ಏಕೆಂದರೆ ಅವರು ಪರಿಶುದ್ಧವಾಗಿದ್ದಾರೆ. ಅವರು ಈ ಪ್ರಪಂಚದ ಭವಿಷ್ಯ. ಅವರು ನೋಡುವುದನ್ನು, ಹಿರಿಯರು ನೋಡಲಾರರು.  ಹಿರಿಯರು ತುಂಬಾ ನಾಗರಿಕ ಜನ!

ಕಿರಿಯರಿಗೆ ಬೆಳಕನ್ನು ತಲುಪಿಸಿದ ಎಲ್ಲ ಕಾರ್ಯಕರ್ತರನ್ನು ನಾನು ನೆನಪಿಸಿಕೊಳ್ಳುತ್ತೇನೆ. ಅವರ ನಿಸ್ವಾರ್ಥ ಸೇವೆ ಮತ್ತು ಕೊನೆಯಿಲ್ಲದ ಉತ್ಸಾಹಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ.

ಒಬ್ಬರು ನನ್ನನ್ನು, ಅಷ್ಟೊಂದು ಸುಂದರ ಹೂಗಳನ್ನು ಹೊಂದಿರುವ ಅತ್ಯುತ್ತಮ ತೋಟಗಾರ ಎಂದು ಕರೆದರು. ನಾನು ಅತ್ಯುತ್ತಮ ತೋಟಗಾರ ಹೌದೋ–ಅಲ್ಲವೋ, ನನ್ನ ತೋಟ ಅತ್ಯುತ್ತಮವಾಗಿದೆ. ನನ್ನ ಹೂಗಳು ಅತ್ಯುತ್ತಮವಾದವು. ನನ್ನ ತೋಟದಲ್ಲಿ ಮುಳ್ಳುಗಳಿಲ್ಲ, ಕಸ–ಕಡ್ಡಿಗಳಿಲ್ಲ. ಇದು ನನ್ನ ಗುರು ಅಮರರವರಿಂದ ಸೃಷ್ಟಿಯಾದ ತೋಟ. ಮಾಸ್ಟರ್ 'ವಿ' ಅತ್ಯುತ್ತಮ ಬೀಜಗಳನ್ನು ತಂದಿದ್ದಾರೆ.

ಕಳೆದ ಕೆಲವು ವಾರಗಳಲ್ಲಿ, ನಾನು ಸಾವಿರಾರು ಜನರನ್ನು ಉದ್ದೇಶಿಸಿ ಮಾತನಾಡಿದೆ ಮತ್ತು ಈ ಪ್ರಪಂಚದ ಭವಿಷ್ಯದ ಬಗ್ಗೆ ಪ್ರಾಮಾಣಿಕವಾಗಿ ಕಾಳಜಿಯಿರುವ ಹಲವಾರು ಜನರೊಂದಿಗೆ ವಿಚಾರವಿನಿಮಯ ಮಾಡಿದೆ. ಪ್ರತಿಯೊಬ್ಬರೂ ಬದಲಾವಣೆಯನ್ನು, ಒಂದು ಮಹಾನ್ ಬದಲಾವಣೆಯನ್ನು ಬಯಸುತ್ತಾರೆ ಎಂಬುದನ್ನು ಗುರುತಿಸಿ ನನ್ನಲ್ಲಿ ಉತ್ಸಾಹ ತುಂಬಿ ಬಂತು. ಮಹಾನ್ ಬದಲಾವಣೆಯೇ ಪ್ರಳಯ. ಪ್ರಳಯ ಉಂಟಾಗುವುದನ್ನು ಪ್ರತಿಯೊಬ್ಬರೂ ಬಯಸಿದ್ದರು. ಮತ್ತು, ಅದು ಸಂಭವಿಸುತ್ತಿದೆ!

ಎಲ್ಲ ಅವ್ಯವಸ್ಥೆಗಳು ಮತ್ತು ಗೊಂದಲ ಮಹಾನ್ ಬದಲಾವಣೆಯ ಒಂದು ಭಾಗ. ಇದು ಪ್ರಾರಂಭ.

ಮಹತ್ತರ ಪರಿಣಾಮಕ್ಕಾಗಿ ಇನ್ನೂ ಹೆಚ್ಚು ಸಂಖ್ಯೆಯಲ್ಲಿ ನಾವು ನಮ್ಮ ಧ್ವನಿಗಳನ್ನೇರಿಸಬೇಕು ಮತ್ತು ಭರವಸೆಗಳನ್ನು ಹೆಚ್ಚಿಸಬೇಕು. ಈಗ, ಯಾರೂ ಈ ಪ್ರಕ್ರಿಯೆಯನ್ನು ನಿಲ್ಲಿಸಲಾರರು. ಯಾರೂ ಈ ಪ್ರಕ್ರಿಯೆಯನ್ನು ಹಿಮ್ಮುಖವಾಗಿಸಲಾರರು. ಈ ಪ್ರಕ್ರಿಯೆ, ಅಂತಿಮವಾಗಿ, ನಮ್ಮನ್ನು ಹೊಸ ಯುಗಕ್ಕೆ ಕರೆದೊಯ್ಯುತ್ತದೆ.

1988ರಿಂದ, ಆಧ್ಯಾತ್ಮಿಕ ಕ್ರಾಂತಿಯ ಬಗ್ಗೆ ನಾನು ಮಾತನಾಡುತ್ತಲೇ ಇದ್ದೇನೆ. ಅದು ಈಗ ಪ್ರಾರಂಭವಾಗಿದೆ.

ಎಲ್ಲ ಭವಿಷ್ಯವಾಣಿಗಳೂ, ಎಲ್ಲ ಭವಿಷ್ಯ ನುಡಿಗಳೂ, ಸುಳ್ಳಾಗುವ ಕಾಲವಿದು.  ಏಕೆಂದರೆ, ಈಗ ಭವಿಷ್ಯ ರೂಪುಗೊಳ್ಳುತ್ತಿದೆ. ನಾವು, ಈ ಪ್ರಪಂಚದ ಜನರು, ನಮ್ಮ ಈ ಭೂಮಿಗೋಸ್ಕರ ಹೊಸ ಭವಿಷ್ಯಗಳನ್ನು ಸೃಷ್ಟಿಸುತ್ತಿದ್ದೇವೆ. ಒಂದು ಹೊಸ ಪ್ರಪಂಚ ಹೊರಬರುತ್ತಿದೆ. ಹೊಸ ಯುಗ ಆರಂಭವಾಗುತ್ತಿದೆ. ■

**ಋಷಿಗಳು ಹೇಳಿಕೊಟ್ಟಂತೆ
ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ–ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.

ಮಾನಸ ಫೌಂಡೇಶನ್ (ರಿ)
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಭಾರತ.
✆ (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ–ಮೇಲ್: info@lightagemasters.com ವೆಬ್–ಸೈಟ್: www.lightagemasters.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ
ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ
ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್‌ನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ) ಪ್ರಕಾಶ್‌ಮಾರ್ಗ್ (ಮರಾಠಿ) ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/- ಮನಿಯಾರ್ಡರ್‌ಗಳನ್ನು ಸ್ವೀಕರಿಸುವುದಿಲ್ಲ.**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.



"ಗುರೂಜಿಯವರು 'ಧ್ಯಾನ ಮಹಾ ಚಕ್ರಂ' ಕಾರ್ಯಕ್ರಮವನ್ನು ಆಂಧ್ರಪ್ರದೇಶದ ಅಮರಾವತಿಯಲ್ಲಿ 21-12-2010ರಂದು ಉದ್ಘಾಟಿಸಿದರು"

### ಸುದ್ದಿ-ಸೂಚನೆ

- 21-12-2010ರಂದು ಗುರೂಜಿಯವರು, ಆಂಧ್ರಪ್ರದೇಶದ ಅಮರಾವತಿಯಲ್ಲಿ 50,000ಕ್ಕೂ ಹೆಚ್ಚು ಧ್ಯಾನಿಗಳನ್ನು ಉದ್ದೇಶಿಸಿ ಮಾತನಾಡಿದರು.
- 4-1-2011ರಂದು ಗುರೂಜಿಯವರು, ಶ್ರೀಮತಿ ವಿದ್ಯಾ ವೀರ್‌ಕರ್‌ರ ಸ್ಟ್ರ್ಯಾಂಡ್ ಬುಕ್ ಹೌಸ್‌ನಲ್ಲಿ, ಶ್ರೀ ಎಮ್ ಅವರು ಬರೆದ 'Apprenticed to a Himalayan Master' ಪುಸ್ತಕದ 'ಪುಸ್ತಕ ವಾಚನ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.
- "Higher Communication and Other Realities" ಮರಾಠಿ ಅನುವಾದದ ಪುಸ್ತಕವನ್ನು 29-01-2011ರಂದು ಮುಂಬೈಯಲ್ಲಿ ಬಿಡುಗಡೆಗೊಳಿಸಲಾಗುವುದು.
- "iGuruji Vol - 4" ಪುಸ್ತಕವನ್ನು 6-2-2011ರಂದು ತಪೋನಗರದಲ್ಲಿ ನಡೆಯುವ ಅಮರ ಜಯಂತಿ ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಲಾಗುವುದು.
- ತಪೋನಗರದಲ್ಲಿ ನಡೆಯುವ ಅಮರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧಕರು ತಮ್ಮ ಹೆಸರನ್ನು 30-1-2011 ರೊಳಗೆ ರಿಜಿಸ್ಟರ್ ಮಾಡಬೇಕು.

### ಈ ತಿಂಗಳು ತಪೋನಗರದಲ್ಲಿ

| | | |
|---|---|---|
| ಭಾನುವಾರಗಳು: | ಉಪನ್ಯಾಸಗಳು: ಬೆಳಿಗ್ಗೆ 11-12 | |
| | ವಿಶೇಷ ಧ್ಯಾನ ಮತ್ತು | |
| | ಲೈಟ್ ಚಾನಲಿಂಗ್: ಮಧ್ಯಾಹ್ನ 12-1 | |
| 06-02-11 | ಅಮರ ಜಯಂತಿ ಕಾರ್ಯಕ್ರಮ | |

### ಆನೇಕಲ್‌ನಲ್ಲಿ ಕಾರ್ಯಕ್ರಮಗಳು

- ಅಮರ ಜಯಂತಿ ಕಾರ್ಯಕ್ರಮವನ್ನು ಆನೇಕಲ್‌ನ ನಮ್ಮ ಸಪ್ತರ್ಷಿ ಧ್ಯಾನ ಕೇಂದ್ರದಲ್ಲಿ 01-02-2011ರಂದು ಸಂಜೆ 6 ಘಂಟೆಗೆ ಆಯೋಜಿಸಲಾಗಿದೆ.
- ಸಾರ್ವಜನಿಕರಿಗಾಗಿ "ಉಚಿತ ಧ್ಯಾನ ಶಿಬಿರ"ವನ್ನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ(ಹಳೆಯ) ಆಡಿಟೋರಿಯಂನಲ್ಲಿ 16-2-2011ರಂದು ಸಂಜೆ 6.30ಕ್ಕೆ ಆಯೋಜಿಸಲಾಗಿದೆ.

### ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 05-12-10 | ಅಲ್ಕಾ ಸಿಂಧಿಯಾ, ಭಾನು ರಾಮ್‌ದಾಸ್ ಮತ್ತು ರಮಾ ಮುರಳಿ |
| 12-12-10 | ರಾಮಚಂದ್ರ, ಪ್ರದ್ಯುಮ್ನ, ಅಜಯ್ ಕುಮಾರ್ ಮತ್ತು ಸೀಮಾ ಅಜಯ್ |
| 19-12-10 | ಜಯಲಕ್ಷ್ಮಿ ಕೆ., ಯಶೋದಾ ಮತ್ತು ರಾಧಾ ಕುಮಾರ್ |
| 26-12-10 | ಮಲ್ಲಿಕಾ ಗಣೇಶನ್ ಮತ್ತು ಚಂದ್ರಸಖಿ |

### ತಪೋನಗರದಲ್ಲಿ ಅಮರ ಜಯಂತಿ ಕಾರ್ಯಕ್ರಮ
### ಭಾನುವಾರ 6-2-2011

| | |
|---|---|
| ಬೆಳಿಗ್ಗೆ 11ಕ್ಕೆ | ಸ್ವಾಗತ ಭಾಷಣ |
| | ಭಾಷಣಗಳು |
| | ಗುರೂಜಿಯವರ ನುಡಿಗಳು |
| | ಪುಸ್ತಕ ಬಿಡುಗಡೆ |
| | ವಿಶೇಷ ಧ್ಯಾನ |
| | ಗುರೂಜಿಯವರಿಂದ ಆಶೀರ್ವಾದ |
| ಮಧ್ಯಾಹ್ನ 12.30ಕ್ಕೆ | ಪ್ರಸಾದ |

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 01 | ಮಂಗಳ | ಮಾಸ ಶಿವರಾತ್ರಿ |
| 02 | ಬುಧ | ಅಮಾವಾಸ್ಯೆ |
| 06 | ಭಾನು | ಅಮರ ಜಯಂತಿ ಕಾರ್ಯಕ್ರಮ |
| 10 | ಗುರು | ರಥ ಸಪ್ತಮಿ |
| 13 | ಭಾನು | ಶುಕ್ಲ ದಶಮಿ |
| 18 | ಶುಕ್ರ | ಪೂರ್ಣಿಮಾ |
| 25 | ಶುಕ್ರ | ಕೃಷ್ಣಾಷ್ಟಮಿ |

**12-02-2011ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಗುರೂಜಿಯವರೊಂದಿಗೆ 'ಅನೌಪಚಾರಿಕ ಸಭೆ' ಇರುತ್ತದೆ. ಭಾಗವಹಿಸಲು ಆಸಕ್ತಿ ಇರುವವರು ತಮ್ಮ ಹೆಸರನ್ನು ಆಫೀಸಿನಲ್ಲಿ ರಿಜಿಸ್ಟರ್ ಮಾಡಬೇಕು.**

**ತಪೋನಗರ ಮತ್ತು ಅಂತರ್‌ಮಾನಸದ ವಿಶಿಷ್ಟ ಫೋಟೋಗಳನ್ನೊಳಗೊಂಡ 'ಡೆಸ್ಕ್ ಕ್ಯಾಲೆಂಡರ್' ಲಭ್ಯವಿದೆ. ಆಸಕ್ತರು ನಮ್ಮ ಆಫೀಸನ್ನು ಸಂಪರ್ಕಿಸಿ.**

ವಾರ್ತಾಪತ್ರದ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.

## ಲೈಟ್ ಚಾನಲ್ ವಿಶ್ವಸಂಚಲನದ ಇತ್ತೀಚಿನ ಸುದ್ದಿ

- 18–12–2010 ರಂದು 100ಕ್ಕೂ ಹೆಚ್ಚು ಶಾಲೆಗಳ ಸುಮಾರು 50,000 ಮಕ್ಕಳಿಂದ ಲೈಟ್ ಚಾನಲ್ ಮಾಡಿಸಿದ್ದು ಒಂದು ಅವಿಸ್ಮರಣೀಯ ಘಟನೆ. ಸುಮಾರು 60 ಕಾರ್ಯಕರ್ತರು ಒಟ್ಟಾಗಿ ಮೈಸೂರು ಮತ್ತು ಅದರ ಸುತ್ತಮುತ್ತಲಿನ ಸ್ಥಳಗಳಲ್ಲಿ ಈ ಶ್ರೇಷ್ಠ ಕಾರ್ಯ ಸಾಕಾರಗೊಳ್ಳುವಲ್ಲಿ ಸಹಕರಿಸಿದರು.
- ಡಿಸೆಂಬರ್ ತಿಂಗಳೊಂದರಲ್ಲೇ 1,70,000ಕ್ಕೂ ಹೆಚ್ಚು ಮಕ್ಕಳು ಸುಮಾರು 290 ಶಾಲೆಗಳಲ್ಲಿ ಲೈಟ್ ಚಾನಲ್ ಮಾಡಿದ್ದಾರೆ. ಕಳೆದ ವರ್ಷ ಒಟ್ಟು 8 ಲಕ್ಷಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಲೈಟ್ ಚಾನಲ್ ಮಾಡಿದ್ದಾರೆ.
- ಈ ಹಿಂದೆ ಶಾಲೆಗಳಿಂದ ದೊರಕಿದ ಪ್ರತಿಕ್ರಿಯೆ ನಮಗೆ ಬೆಳಕನ್ನು ಹರಡುವ ಈ ನಿಸ್ವಾರ್ಥ ಕೆಲಸ ಮಾಡಲು ಇನ್ನೂ ಹೆಚ್ಚು ಪ್ರೇರಣೆ ನೀಡಿದೆ. ■

## ಲೈಟ್ ಚಾನಲಿಂಗ್ ಅನುಭವಗಳು

ನಾನು ಲೈಟ್ ಚಾನಲ್ ತಂತ್ರವನ್ನು ಅಭ್ಯಾಸ ಮಾಡುತ್ತಿದ್ದಾಗ, ಇದ್ದಕ್ಕಿದ್ದಂತೆ ಶಾಂತತೆ ತುಂಬಿತು. ನಾನು ಶಾಂತತೆಯೊಂದಿಗೆ ಸಮಾಧಾನವನ್ನು ಅನುಭವಿಸಿದೆ ಮತ್ತು ಸುತ್ತಲಿನ ಅರಿವು ಇಲ್ಲದಂತಾಯಿತು.
– ಶ್ರೀಮತಿ ಅಬೀದಾ ಬೇಗಂ, ಶಿಕ್ಷಕಿ, ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ, ಕೈವಾರ

ಲೈಟ್ ಚಾನಲಿಂಗ್‌ನ ನಂತರ ನನ್ನಲ್ಲಿ ಚುರುಕುತನ ಹೆಚ್ಚಾಗಿದೆ. ಹಿಂಸೆಯಿಲ್ಲದ ಮತ್ತು ನಿಸ್ವಾರ್ಥತೆಯಿಂದ ಕೂಡಿದ ಸಂಪೂರ್ಣ ಪ್ರಪಂಚ ನನಗೆ ದೊರಕಿತು. –ಹಿಮಾಂಶು, ವಿದ್ಯಾರ್ಥಿ, ಸ್ವಾಮಿ ವಿವೇಕಾನಂದ ಗ್ರಾಮೀಣ ಆಂಗ್ಲ ಮಾಧ್ಯಮ ಶಾಲೆ, ಚಂದಾಪುರ, ಆನೇಕಲ್

28–12–2010 ರಂದು ತಲಗ್ವಾರದ ಸರ್ಕಾರಿ ಪ್ರೌಢಶಾಲೆಯಲ್ಲಿ ಲೈಟ್ ಚಾನಲ್ ಕಾರ್ಯಕ್ರಮ ನಡೆಸಿದಾಗ, ಒಬ್ಬ ವಿದ್ಯಾರ್ಥಿನಿ ತಾನು 22–12–2010 ರಂದು ಚಿಂತಾಮಣಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾಗಿ ತಿಳಿಸಿದಳು. ನಂತರ ಆಕೆ ತಲಗ್ವಾರದ ಅವಳ ಶಾಲೆಯಲ್ಲಿ ಈ ಕಾರ್ಯಕ್ರಮವನ್ನು ನಡೆಸಬೇಕೆಂದು ಪ್ರಾರ್ಥಿಸುತ್ತಿದ್ದಳು. ಅವಳ ಆ ಪ್ರಾರ್ಥನೆಗೆ 7 ದಿನದೊಳಗೆ ಉತ್ತರ ದೊರಕಿತ್ತು! –ಮುಕೇಶ್ ಪರ್ಮಾರ್

## ತಪೋನಗರ ಡೈರಿ

**ಸೀಮಾ ಅಲ್‌ವೇಲ್ ಸೋಮಯಾಜಿ; ಅನು: ಪಾಂಡುರಂಗ**

21ನೇ ಡಿಸೆಂಬರ್ 2010ಕ್ಕೆ ನಮ್ಮ ಭೂಮಿ ಫೋಟಾನ್ ಬೆಲ್ಟ್ ಚೈತನ್ಯವಲಯವನ್ನು ಪ್ರವೇಶಿಸಿ ಒಂದು ವರ್ಷ ಪೂರ್ಣಗೊಂಡಿದೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ, ಹೊಸ ಮತ್ತು ಶಕ್ತಿಯುತ ಚೈತನ್ಯಗಳು ತಪೋನಗರದ ಕಂಪನಗಳನ್ನು ಹೆಚ್ಚಿಸಿರುವುದನ್ನು ಯಾರಾದರೂ ಸಂವೇದಿಸಬಹುದಾಗಿದೆ. ವಿವರಿಸಲಾಗದ ಉತ್ಸಾಹ ತಪೋನಗರ ನಿವಾಸಿಗಳಲ್ಲಿ ಹಿಂದಿಗಿಂತಲೂ ಹೆಚ್ಚಿನ ಒಗ್ಗಟ್ಟನ್ನು ತಂದಿದೆ ಮತ್ತು ಈ ಆತ್ಮೀಯತೆ ತಪೋನಗರದಿಂದ ಹೊರಗೆ ಇರುವವರನ್ನು ಕೂಡಾ ತಲುಪಿದೆ. ಗುರೂಜಿಯವರ ಅನಿರ್ಬಂಧಿತ ಪ್ರೀತಿ, ಅಗಾಧವಾದ ಸಹನೆ ಮತ್ತು ಪ್ರಯತ್ನಗಳಿಂದ ಪೋಷಿತವಾದ, ಈ ಜಾಗವನ್ನು ಎರಡನೇ ಶಂಬಲವಾಗಿ ರೂಪಿಸಬೇಕೆಂಬ ಅವರ ಕನಸುಗಳು ಚಿಗುರೊಡೆಯುತ್ತಿವೆ. ಇದಕ್ಕೆ, ತಪೋನಗರ ನಿವಾಸಿಗಳ ತಿಂಗಳ ಕೂಟದಲ್ಲಿ ಪ್ರತಿಯೊಬ್ಬರೂ ಗುರೂಜಿಯವರ ಮಹತ್ಕಾರ್ಯದ ಒಂದು ಭಾಗವಾಗಿದ್ದುದಕ್ಕೆ ತಮ್ಮ ಕೃತಜ್ಞತೆಗಳನ್ನು ಸಲ್ಲಿಸಿದುದೇ ಸಾಕ್ಷಿ. ಎಲ್ಲರ ಹೃದಯಗಳಲ್ಲಿ ತುಂಬಿರುವ ಬೆಳಕಿನಿಂದ, ಪ್ರತಿಯೊಬ್ಬರಲ್ಲೂ ಶಂಬಲ ನಿಧಾನವಾಗಿ ಅರಳುತ್ತಿದೆ.

ಕ್ರಿಸ್‌ಮಸ್ ವಿಶೇಷ ಧ್ಯಾನದಲ್ಲಿ ಅನೇಕರು ಭಾಗವಹಿಸಿದ್ದರು. ನಾವು ಹೊಸವರ್ಷದ ಸವಾಲುಗಳನ್ನು ಎದುರಿಸಲು ಸಿದ್ಧವಾಗುವುದಕ್ಕಾಗಿ, ಮಾಸ್ಟರ್ ಜೀಸಸ್ ಕ್ರೈಸ್ಟ್ ನಮ್ಮನ್ನು ಬೆಳಕಿನಿಂದ ತುಂಬಿದರು. ಪ್ರತಿಯೊಬ್ಬರೂ ಸಮಸ್ತ ವಿಶ್ವಕ್ಕೆ ತಮ್ಮ ಮನದಣಿಯುವಷ್ಟು ಬೆಳಕನ್ನು ಹರಡಲು, ಅಖಂಡ ಧ್ಯಾನ ಕಾರ್ಯಕ್ರಮ ಅವಕಾಶ ಕಲ್ಪಿಸಿತು.

ಡಿಸೆಂಬರ್ 31ರ ಮಧ್ಯರಾತ್ರಿಯ ಹೊಸವರ್ಷದ ಸಂಭ್ರಮಾಚರಣೆ ಮತ್ತು ಉಲ್ಲಾಸದೊಂದಿಗೆ ತಪೋನಗರದಲ್ಲಿ ಹೊಸ ಡೈನಿಂಗ್ ಹಾಲ್–ಅನ್ನು ಗುರೂಜಿಯವರು ಉದ್ಘಾಟಿಸಿದರು. ಆ ಸಂದರ್ಭದಲ್ಲಿ ಶೂನ್ಯಮಾಸದ ಋಷಿಯೂ ಕೂಡಾ ತನ್ನ ಆಶೀರ್ವಾದಗಳ ಮಳೆಗರೆದರು. ನಂತರ ಹೊಸವರ್ಷವನ್ನು ಏಕತೆಯ ತಂತ್ರದ ಅಭ್ಯಾಸದ ಮೂಲಕ ಸ್ವಾಗತಿಸಲಾಯಿತು.

2010ರ ಮುಕ್ತಾಯ ಮತ್ತು 2011ರ ಪ್ರಾರಂಭಗಳೆರಡೂ ಜೋಡಿ ಗ್ರಹಣಗಳಿಂದ ಸಂಪರ್ಕಗೊಂಡಿದ್ದವು. ಈ ಎರಡೂ ಗ್ರಹಣಗಳು ಬೆಳಕಿನ ಯುಗದ ಪ್ರಾರಂಭವನ್ನು ಸಾರಿದವು. ■

## ಲೈಟ್ ಚಾನಲ್ಸ್
### ವಿಶ್ವ ಸಂಚಲನ

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆ ಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.comಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್‌ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)

(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)

05–12–2010

ಆರಂಭಿಕ ಧ್ಯಾನಿಗಳಿಗೆ ಕೆಲವು ಅಂಶಗಳನ್ನು ಅನುಸರಿಸುವಲ್ಲಿ ಕಷ್ಟವೆನಿಸಿದರೆ, ಅವರು ನಮ್ಮ ಪುಸ್ತಕಗಳನ್ನು ಓದುವಂತೆ ಸಲಹೆ ನೀಡಲಾಗಿದೆ. ಕೊನೆಯ ಪಕ್ಷ ಪ್ರಾಥಮಿಕ ಪುಸ್ತಕಗಳನ್ನು ಓದಬೇಕು. ಅವು ಹೆಚ್ಚಿನ ಮಾಹಿತಿಗಳನ್ನು ಒಳಗೊಂಡಿವೆ. ಅವರು ವಾರದಲ್ಲಿ ಕನಿಷ್ಠ 5 ದಿನ ಧ್ಯಾನ ಮಾಡಬೇಕು, ಇಲ್ಲವಾದರೆ ದೀಕ್ಷೆಯಿಂದ ಕಾರ್ಯೋನ್ಮುಖವಾಗಿರುವ ಪ್ರಕ್ರಿಯೆಗಳು ಕೆಲಸ ಮಾಡುವುದಿಲ್ಲ. ನಿಮಗೆ ಅನುಮಾನವಿದ್ದರೆ ಶಿಕ್ಷಕರಿಂದ ಪರಿಹರಿಸಿಕೊಳ್ಳಲು ಹಿಂಜರಿಯಬೇಡಿ. ಕೆಲವು ಸಲ ಒಂದು ಸಣ್ಣ ಅನುಮಾನವಿದ್ದರೂ, ಅದು ದೊಡ್ಡ ಅಡಚಣೆಯಾಗಿ ಪರಿಣಮಿಸಬಹುದು. ಮೊದಲನೆ ಶಂಬಲ ನಿಯಮವನ್ನು ಅಭ್ಯಾಸ ಮಾಡಿ ಅಥವಾ ಬೆಳಕನ್ನು ಯಾವಾಗಲೂ ಹೊಂದಿರಿ.

ನಾನು ಪುನಃ ಹೇಳುತ್ತೇನೆ: ನಿಶ್ಚಲತೆ ಮತ್ತು ಏಕಾಂತತೆ ಇರುವ ಒಂದು ಪ್ರತ್ಯೇಕ ಸ್ಥಳವನ್ನು ನಮಗಾಗಿ ಸೃಷ್ಟಿಸಿಕೊಳ್ಳುವುದು ಅತ್ಯಂತ ಮುಖ್ಯ. ಈ ಸ್ಥಳದಲ್ಲಿ ನಾವು ಚಿಂತನೆ ಮಾಡಬಹುದು, ಅನುಭವಿಸಬಹುದು, ಋಷಿಗಳು ಮತ್ತು ದೇವರೊಡನೆ ಸಂಪರ್ಕಿಸಬಹುದು. ನಾವು ಒಂದು ಕವಿತೆ ಅಥವಾ ಹಾಡನ್ನು ರಚಿಸಬಹುದು. ಒಂದು ಹಾಡಿಗೆ ರಾಗ ಹಾಕಬಹುದು. ಜ್ಞಾನ, ಚೈತನ್ಯಗಳನ್ನು ಕೂಡ ಪಡೆಯಬಹುದು. ಈ ಸ್ಥಳವನ್ನು ನಾವು ನಮಗೆ ತಿಳಿಯದಂತೆಯೇ ಬಹುಶಃ ಸೃಷ್ಟಿಸಿಕೊಂಡಿರಬಹುದು. ಇದರ ಬಗ್ಗೆ ಅರಿವಿಟ್ಟುಕೊಳ್ಳೋಣ ಮತ್ತು ಅಭಿವೃದ್ಧಿ ಪಡಿಸಿಕೊಳ್ಳೋಣ. ಈ ಸ್ಥಳದೊಳಗೆ ಬೇರೆಯವರು ಅನುಚಿತವಾಗಿ ಪ್ರವೇಶ ಮಾಡಲು ಬಿಡಬಾರದು, ಏಕೆಂದರೆ ಇದು ಅಡಚಣೆಯುಂಟುಮಾಡುತ್ತದೆ. ಇದೇ ರೀತಿ ನಾವು ಬೇರೆಯವರ ಪ್ರತ್ಯೇಕ ಸ್ಥಳಕ್ಕೆ ಅನಗತ್ಯ ಪ್ರವೇಶ ಮಾಡಬಾರದು.

ನನಗೆ ಒಂದು ಆಲೋಚನೆ ಬಂತು: "ಇಲ್ಲಿ ಒಂದು ಕ್ರಮವಿದೆ, ಹಾಗೆಯೇ ಎಲ್ಲೆಡೆ ಒಂದು ಕ್ರಮವಿರುತ್ತದೆ." ಭೌತಿಕ ನೆಲೆಯಲ್ಲಿ, ನಾವು ವಾಸಿಸುತ್ತಿರುವ ಕೋಣೆಯಲ್ಲಿ, ನಮ್ಮ ಪರಿಸರದಲ್ಲಿ ಒಂದು ಕ್ರಮವಿದ್ದರೆ, ಅದು ಇತರ ನೆಲೆಗಳಿಗೆ, ಭಾವನಾತ್ಮಕ ಮತ್ತು ಬೌದ್ಧಿಕ ಹಂತಗಳಿಗೂ ವಿಸ್ತರಿಸುತ್ತದೆ.

ನಾವು ಧ್ಯಾನ ಮಾಡುವ ಮೊದಲು ಸ್ನಾನದ ಅಗತ್ಯವಿಲ್ಲವೆಂದು ತಿಳಿಸಿದ್ದೆವು. ಆದರೆ ನಮ್ಮಲ್ಲಿ ಪ್ರತಿಯೊಬ್ಬರೂ ಸ್ನಾನದ ನಂತರ ಉಂಟಾಗುವ ಉಲ್ಲಾಸ, ಧ್ಯಾನ ಮಾಡಲು ಎಷ್ಟೊಂದು ಸಹಾಯ ಮಾಡುತ್ತದೆ ಎಂಬುದನ್ನು ಅನುಭವಿಸಿದ್ದೇವೆ. ಆದ್ದರಿಂದ ಈ ಹಂತದಲ್ಲಿರುವ ಕ್ರಮ, ನಿರ್ಮಲತೆ, ಶುಚಿತ್ವಗಳು ಇತರ ಹಂತಗಳಿಗೆ ವಿಸ್ತರಿಸುತ್ತವೆ. ಇವುಗಳನ್ನು ನಾವು ಅಭ್ಯಾಸ ಮಾಡಬೇಕು.ವಿಶ್ವದಲ್ಲಿ ಪರಿಪೂರ್ಣವಾದ ಕ್ರಮ ಮತ್ತು ಬುದ್ಧಿಶಕ್ತಿ ಇದೆ. ಗ್ಯಾಲಕ್ಸಿಗಳು ಒಂದು ನಿರ್ದಿಷ್ಟ ಪಥದಲ್ಲಿ ಚಲಿಸುತ್ತಿವೆ. ತಾರೆಗಳು, ಗ್ರಹಗಳು ತಮ್ಮದೇ ಪಥದಲ್ಲಿ ಚಲಿಸುತ್ತಿವೆ. ಅಲ್ಲಿ ಡಿಕ್ಕಿ ಹೊಡೆಯುವುದು ಅಥವಾ ಘರ್ಷಣೆ ಇಲ್ಲ. ನಮ್ಮ ಬದುಕಿನಲ್ಲಿನ ಕ್ರಮ ಅಥವಾ ಶಿಸ್ತು, ನಮ್ಮನ್ನು ದೇವರೊಂದಿಗೆ, ಇಡೀ ಸೃಷ್ಟಿಯೊಂದಿಗೆ ಮತ್ತು ಪ್ರಪಂಚದೊಂದಿಗೆ ಶ್ರುತಿಗೊಳಿಸಿಕೊಳ್ಳಲು ಸಹಾಯ ಮಾಡುತ್ತದೆ. ಇದೊಂದು ಅದ್ಭುತ ಮಾಹಿತಿ.

ವಿಶ್ವಕ್ಕೆ ತನ್ನದೇ ಆದ ಕನಸುಗಳು ಮತ್ತು ಬಯಕೆಗಳಿವೆ. ಅವು ಸಾಕಾರಗೊಳ್ಳಬೇಕಿದೆ ಎಂಬುದನ್ನು ಅರಿಯಬೇಕು. ನಾವು ಶಿಸ್ತು ಮತ್ತು ಕ್ರಮಗಳಿಗೆ ಶ್ರುತಿಗೊಂಡಾಗ, ವಿಶ್ವ ತನ್ನ ಕನಸುಗಳನ್ನು ನಮ್ಮ ಮೂಲಕ ಸಾಕಾರ ಪಡಿಸಿಕೊಳ್ಳುತ್ತದೆ. ಆಗ ನಾವು ಮತ್ತು ಪ್ರಪಂಚ ಬೇರೆಯಲ್ಲ, ಒಂದೇ ಎಂಬುದನ್ನು ಮನಗಾಣುತ್ತೇವೆ. ಅದೊಂದು ಬಹುದೊಡ್ಡ ಸ್ಥಿತಿ. ಆ ಸ್ಥಿತಿಯಲ್ಲಿ ಏಕತೆ ಕಾರ್ಯನಿರತವಾಗುತ್ತದೆ.

ನಾನು ಒಬ್ಬರ ಪತ್ರವನ್ನು ಓದಿದಾಗ ಅವರ ಪ್ರಬುದ್ಧತೆಯನ್ನು ಕಂಡು ಆಶ್ಚರ್ಯಚಕಿತನಾದೆ. ಅವರು ಹೇಳುತ್ತಾರೆ: "ನೋವೂ ಚೆನ್ನ, ನಲಿವೂ ಚೆನ್ನ. ಒಳ್ಳೆಯ ಧ್ಯಾನಿಯಾಗಬೇಕೆಂಬ ಬಯಕೆಯೂ ಇಲ್ಲ, ಚೈತನ್ಯಗಳನ್ನು ಪಡೆಯುವ ಇಚ್ಛೆಯೂ ಮಾಯವಾಗಿದೆ. ಈಗ ಜೀವನ ಚೆನ್ನಾಗಿದೆ, ಸುಂದರವಾಗಿದೆ. ಎಲ್ಲವೂ ಚೆನ್ನಾಗಿದೆ, ಎಲ್ಲವೂ ಸುಂದರವಾಗಿದೆ." ಈ ಸಾಲುಗಳಲ್ಲಿ ಕೋಟಿಗಟ್ಟಲೆ ಛಾಯೆಗಳಿವೆ. ಇಂಥ ಸ್ಥಿತಿಗಳನ್ನು ಕೇವಲ ಧ್ಯಾನ ಮಾಡುವುದರಿಂದ ನಾವು ಮುಟ್ಟಲು ಸಾಧ್ಯವಿಲ್ಲ. ನಾವು ಆಧ್ಯಾತ್ಮಿಕವಾಗಿ ಬೆಳೆದಾಗ ಮಾತ್ರ ಈ ಸ್ಥಿತಿಗಳನ್ನು ಮುಟ್ಟಲು ಸಾಧ್ಯ. ಆಗ ನಾವು ಧ್ಯಾನ ಮಾಡಿದರೂ ಸರಿ, ಧ್ಯಾನ ಮಾಡದಿದ್ದರೂ ಸರಿ ಏಕೆಂದರೆ ನಾವು ದೈವದೊಂದಿಗೆ ಶ್ರುತಿಗೊಂಡಿರುತ್ತೇವೆ.

ಸ್ವಾಮಿ ವಿವೇಕಾನಂದರು ನಿರ್ವಿಕಲ್ಪ ಸಮಾಧಿಯ ಅನುಭವ ಪಡೆದ ನಂತರ ರಾಮಕೃಷ್ಣ ಪರಮಹಂಸರು ಹೇಳಿದರು: "ನಿನಗೆ ಪುನಃ ಈ ಅನುಭವವಾಗುವುದಿಲ್ಲ. ನಾನೀಗ ಅದಕ್ಕೆ ಬೀಗ ಹಾಕಿ, ಅದರ ಕೀಲಿಕೈಯನ್ನು ಇಟ್ಟುಕೊಂಡಿದ್ದೇನೆ." ಒಬ್ಬರು ವ್ಯಕ್ತಿ ಕೇಳಿದರು: "ಈ ಬೀಗದ ಕೈ ಯಾವುದು?" ವಿವೇಕಾನಂದರು ಕೇವಲ ಸಮಾಧಿಯನ್ನು ಅನುಭವಿಸುವುದಕ್ಕಾಗಿ ಜನಿಸಲಿಲ್ಲ, ಕೆಲಸ ಮಾಡುವುದಕ್ಕಾಗಿ ಜನಿಸಿದ್ದರು. ಇದೇ ರೀತಿ ಋಷಿಗಳ ನೇತೃತ್ವದಡಿಯಲ್ಲಿ ಯಾರು ಸೇರುತ್ತಾರೆಯೋ ಅವರು ಋಷಿಗಳ ಕಾರ್ಯವನ್ನು ಕೈಗೆತ್ತಿಕೊಳ್ಳುತ್ತಾರೆ. ನಾವು ಇಲ್ಲಿ ಕೆಲಸ ಮಾಡುವುದಕ್ಕಾಗಿ ಇದ್ದೇವೆ. ಕೆಲವು ಸಲ ನಮಗೆ ಅನುಭವವಾಗಲು ಅನುಮತಿ ಇಲ್ಲ. ನಾವು ಈ ಗುರಿಯನ್ನು ಅರಿತುಕೊಳ್ಳದಿದ್ದರೆ, ಸಾಕಾರಗೊಳಿಸದಿದ್ದರೆ ನಮ್ಮ ಜೀವನಗಳು ವ್ಯರ್ಥವಾಗುತ್ತವೆ. ನಮ್ಮ ಕೀಲಿಕೈಗಳು ಋಷಿಗಳ ಬಳಿ ಇವೆ.

12–12–2010

ಹೀಲಿಂಗ್ ಚೈತನ್ಯಗಳಿಗೆ ಬುದ್ಧಿಶಕ್ತಿ ಇರುತ್ತದೆ. ಅವು ಹೀಲ್ ಮಾಡುವುದು ಮಾತ್ರವಲ್ಲ ಒಂದು ನಿರ್ದಿಷ್ಟವಾದ ಚಿಕಿತ್ಸೆ ತೆಗೆದುಕೊಳ್ಳಲು ಸಹಾಯ ಮಾಡುತ್ತವೆ ಅಥವಾ ಬೇರೆ ವೈದ್ಯರಲ್ಲಿಗೆ ಹೋಗುವಂತೆ ಮಾರ್ಗದರ್ಶನ ನೀಡುತ್ತವೆ. ಅದರ ಜೊತೆಗೆ ವೈದ್ಯಕೀಯ ಚಿಕಿತ್ಸೆ ಸಹಾಯ ಮಾಡುತ್ತದೆ. ಮಾರ್ಗದರ್ಶನ ಇನ್ನೊಂದು ನೆಲೆಯಲ್ಲಿ ಸಂಭವಿಸುವುದರಿಂದ ಬಹುಶಃ ಜನರಿಗೆ ಇದು ತಿಳಿಯುವುದಿಲ್ಲ. ಅಲ್ಲದೆ ಹೀಲಿಂಗ್ ಚೈತನ್ಯಗಳು ಕರ್ಮದ ಸ್ವಲ್ಪ ಭಾಗ ತೆಗೆದುಕೊಳ್ಳುತ್ತವೆ. ಆ ಕರ್ಮಗಳನ್ನು ಹೀಲರ್‌ಗೆ ವರ್ಗಾಯಿಸುತ್ತವೆ. ಹೀಲಿಂಗ್ ಚೈತನ್ಯಗಳು ನಾವು ಪರಿವರ್ತನೆಯಾಗಲು ಸಹಾಯ ಮಾಡುತ್ತವೆ. ಇವು ವ್ಯಕ್ತಿಯೊಂದಿಗೆ ಅಂತರಂಗದ ಮಟ್ಟದಲ್ಲಿ ಮಾತನಾಡಿ, ವ್ಯಕ್ತಿ ತನ್ನ ತಪ್ಪುಗಳನ್ನು, ದೋಷಗಳನ್ನು, ಕೊರತೆಗಳನ್ನು ಅರಿಯುವಂತೆ ಮಾಡುತ್ತವೆ. ನಾವು ಎಚ್ಚರಕೆಯಿಂದಿದ್ದರೆ ಭೌತಿಕ ಕಾಯಿಲೆಯಿಂದ ಪಾರಾಗಲು ಹೇಗೆ ಮತ್ತು ಎಲ್ಲಿ ಪ್ರಯತ್ನಿಸಬೇಕೆಂಬುದು ತಿಳಿಯುತ್ತದೆ. ಆದ್ದರಿಂದ ಹೀಲಿಂಗ್ ಸರಳವಾದ ಏಕಮಾತ್ರ ಪ್ರಕ್ರಿಯೆ ಅಲ್ಲ.

ಒಬ್ಬರು ಪತ್ರ ಬರೆಯುತ್ತ, ತಮಗೆ ಖಿನ್ನತೆ ಮತ್ತು ದುಃಖದಿಂದಾಗಿ ಉದ್ಯೋಗ ಬಿಟ್ಟು, ಈ ಪ್ರಪಂಚದಿಂದ ದೂರ ಹೋಗಬೇಕೆಂದೆನಿಸುತ್ತಿದೆ ಎಂದು ತಿಳಿಸಿದರು. ಇದಕ್ಕೆ ಕಾರಣ, ತಮ್ಮ ಸುತ್ತ ಇರುವ ಜನರೆಲ್ಲ ಬಹಳ ಸ್ವಾರ್ಥಿಗಳು ಮತ್ತು ಯಾವುದೇ ಬದಲಾವಣೆ ಬಯಸದವರು ಮತ್ತು ಅವರನ್ನು ತಿದ್ದಲು ತಿಳಿಯದಾಗಿದೆ ಎಂಬುದು. ಇಲ್ಲಿ ಅತ್ಯಂತ ಮುಖ್ಯವಾದ ಅಂಶವೆಂದರೆ ಜನರನ್ನು ತಿದ್ದುವುದು ನಮ್ಮ ಕೆಲಸವಲ್ಲ. ನಾನಿಲ್ಲಿ ಇರುವುದು ಋಷಿಗಳಿಂದ ಪಡೆದ ಜ್ಞಾನ ಮತ್ತು ತಂತ್ರಗಳನ್ನು ನಿಮ್ಮ ಮುಂದಿಡುವುದಕ್ಕಾಗಿ. ನನ್ನ ಕೆಲಸ ತಿದ್ದುವುದಲ್ಲ, ಮಾರ್ಗದರ್ಶನ ಮಾಡುವುದು.

ಇನ್ನೊಬ್ಬರನ್ನು ತಿದ್ದಲು ಆಗಲಿಲ್ಲವೆಂದು ಏಕೆ ಹತಾಶರಾಗಬೇಕು? ಅವರು ಸರಿಯಿದ್ದಾರೆಯೇ? ಆದ್ದರಿಂದ ಮೊದಲು ತಿದ್ದಿಕೊಳ್ಳುವಿಕೆ ನಮ್ಮಿಂದ ಪ್ರಾರಂಭವಾಗಲಿ. ದೇವರು ಮತ್ತು ಋಷಿಗಳಿಗೆ ಬೇರೆಯವರನ್ನು ತಿದ್ದುವ ಕೆಲಸ ಮಾಡಲು ಬಿಟ್ಟುಬಿಡಬೇಕು. ಋಷಿಗಳು ಕೆಲಸ

## ಗುರೂಜಿಯವರ ನುಡಿಗಳು

**(ಗುರೂಜಿಯವರ ಭಾನುವಾರದ ಉಪನ್ಯಾಸಗಳ ಸಂಗ್ರಹ)**

**(ಸಂಗ್ರಹ: ಶೋಭಾ ಕೆ. ರಾವ್; ಅನುವಾದ: ಶಿವಪ್ರಕಾಶ್ ಎಲ್)**

ಮಾಡುತ್ತಿದ್ದಾರೆ. ನಾವು ಮೀರಲಾರದ ನಿಯಮಗಳಿವೆ. ವ್ಯಕ್ತಿಗಳು ಬದಲಾಗಲು ನಿರ್ಧರಿಸಬೇಕು. ತಮ್ಮನ್ನು ತಾವು ತಿದ್ದಿಕೊಳ್ಳಬೇಕು. ಹತಾಶರಾಗುವುದು ತಪ್ಪು.

ಪ್ರತಿಯೊಂದು ಸಮಸ್ಯೆ ಒಂದು ಆಧ್ಯಾತ್ಮಿಕ ಬೇರನ್ನು ಹೊಂದಿರುತ್ತದೆ. ನಾವು ಅದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕು ಮತ್ತು ಅಂತರ್–ಗ್ರಹಿಕೆಯನ್ನು ಉಪಯೋಗಿಸಿ ಗುರುತಿಸಲು ಪ್ರಯತ್ನಿಸಬೇಕು. ನೋವು ಮುಂದುವರಿಯುತ್ತಿದ್ದರೆ, ನೀವು ನಿಮ್ಮ ಅಂತರಂಗದ ಸ್ಥಳದಲ್ಲಿ ಏಕಾಂತವಾಗಿ ಕುಳಿತು ಚಿಂತಿಸಬೇಕು. ಆಗ ಅದನ್ನು ಗುರುತಿಸಿ, ನಿರ್ಮೂಲನ ಮಾಡಲು ನಿಮಗೆ ಸಾಧ್ಯವಾಗುತ್ತದೆ. ಸಮಸ್ಯೆ ಪವಾಡ ಸದೃಶವಾಗಿ ಮಾಯವಾಗುತ್ತದೆ.

ಗುಂಪು ಧ್ಯಾನಗಳು ನಮ್ಮ ಧ್ಯಾನದ ಗುಣಮಟ್ಟವನ್ನು ಸುಧಾರಿಸುತ್ತವೆ. ಒಬ್ಬ ವ್ಯಕ್ತಿ ಗುಂಪು ಧ್ಯಾನದಲ್ಲಿ ಭಾಗವಹಿಸಿದರೆ, ಅವರು ಕ್ರಮಬದ್ಧವಾಗಿ ಧ್ಯಾನ ಮಾಡಲು ಸಾಧ್ಯವಾಗುತ್ತದೆ. ಒಬ್ಬ ಋಷಿಯ ಸಮ್ಮುಖದಲ್ಲಿ ನಡೆಯುವ ಇಲ್ಲಿನ ಗುಂಪು ಧ್ಯಾನಗಳು ಅತ್ಯಂತ ಪ್ರಯೋಜನಕಾರಿ. ಋಷಿಗಳು ಪ್ರತಿಯೊಬ್ಬರ ಧ್ಯಾನವನ್ನು ಮೇಲ್ವಿಚಾರಿಸುತ್ತಾರೆ, ನಮ್ಮನ್ನು ಮೇಲಕ್ಕೆ ಎತ್ತಲು ಪ್ರಯತ್ನಿಸುತ್ತಾರೆ, ಶ್ರುತಿಗೊಳಿಸಲು ಪ್ರಯತ್ನಿಸುತ್ತಾರೆ ಮತ್ತು ಚೈತನ್ಯಗಳನ್ನು ನೀಡುತ್ತಾರೆ. ಗುಂಪು ಧ್ಯಾನಕ್ಕೆ ನೀವು ಭೌತಿಕವಾಗಿ ಇಲ್ಲಿಗೆ ಬರುವ ಅಗತ್ಯವಿಲ್ಲ. ನೀವು ಎಲ್ಲಿದ್ದರೂ ಮನಸ್ಸಿನಿಂದ ಸಂಪರ್ಕ ಮಾಡಬಹುದು. ಪದಗಳಿಗಿಂತ ಧ್ಯಾನ ಮುಖ್ಯ. ನಾವು ವೈಯಕ್ತಿಕವಾಗಿ ಅಥವಾ ಗುಂಪು ಧ್ಯಾನಗಳಲ್ಲಿ ಭಾಗವಹಿಸಿದಾಗ ನಾವು ಒಂದು ಮೌನ ಆಧ್ಯಾತ್ಮಿಕ ಆಂದೋಲನದಲ್ಲಿ ಭಾಗವಹಿಸುತ್ತಿದ್ದೇವೆ ಎಂದು ತಿಳಿಯಬೇಕು. ಈ ಧ್ಯಾನಗಳು ಕಂಪನಗಳನ್ನು ಉತ್ಪತ್ತಿಮಾಡಿ ಪ್ರಪಂಚಕ್ಕೆಲ್ಲಾ ಹರಡಿ, ಪರಿವರ್ತನೆಗಳನ್ನು ತರುತ್ತವೆ.

ನಾವೆಲ್ಲರೂ ವಸ್ತುಗಳೊಂದಿಗೆ ಮಾತನಾಡಲು ಪ್ರಯತ್ನಿಸಬೇಕು. ಪ್ರತಿಯೊಂದು ನಿರ್ಜೀವ ವಸ್ತುವಿನಲ್ಲಿ ಪ್ರಜ್ಞೆ ಮತ್ತು ಒಂದು ವ್ಯಕ್ತಿತ್ವವಿದೆ. ನೀವು ಮರಗಳು, ಹಕ್ಕಿಗಳು, ಪದಾರ್ಥಗಳು, ನದಿಯೊಂದಿಗೆ ಕೂಡಾ ಮಾತನಾಡಬಹುದು. ಪುರಾಣಗಳಲ್ಲಿ ಇಂತಹ ಸಂದರ್ಭಗಳನ್ನು ನೋಡಬಹುದು.

ಶ್ರೀರಾಮನು ಸಮುದ್ರದೊಂದಿಗೆ ಮಾತನಾಡುತ್ತಾನೆ. ಸಮುದ್ರವೂ ಶ್ರೀರಾಮನೊಂದಿಗೆ ಮಾತನಾಡುತ್ತದೆ. ಇಂತಹ ಸುಂದರ ಅನುಭವಗಳನ್ನು ಗಮನಿಸಿದಾಗ ನಾವು ಚೈತನ್ಯಗೊಳ್ಳುತ್ತೇವೆ ಮತ್ತು ಸ್ಫೂರ್ತಿ ಪಡೆಯುತ್ತೇವೆ. ನಮ್ಮ ಸುತ್ತ ಒಂದು ಬುದ್ಧಿಶಕ್ತಿ ಮತ್ತು ಪ್ರೀತಿ ಇರುವುದು, ಅವು ನಮ್ಮನ್ನು ಸಂಪರ್ಕಿಸಲು ಮತ್ತು ನಮಗೆ ಸಹಾಯ ಮಾಡಲು ಕಾಯುತ್ತಿರುವುದು, ಇಂತಹ ವಾಸ್ತವಾಂಶಗಳು ನಮ್ಮಲ್ಲಿ ಭರವಸೆ ಮೂಡಿಸುತ್ತವೆ. ಈ ಜಾಗೃತಿ ಇರದಿದ್ದರೆ ನಮ್ಮಲ್ಲಿ ಭರವಸೆ ಇರುತ್ತಿರಲಿಲ್ಲ. ನನ್ನ ಗುರುವನ್ನು ನೋಡುವುದಕ್ಕೆ ಮೊದಲು ನನಗೆ ಯಾವ ಭರವಸೆಯೂ ಇರಲಿಲ್ಲ. ಈ ಪ್ರಪಂಚ ಅವನತಿ ಹೊಂದುತ್ತದೆ ಎಂದು ಭಾವಿಸಿದ್ದೆ. ಈ ಪ್ರಪಂಚಕ್ಕೆ ಯಾವ ಭವಿಷ್ಯವೂ ಇಲ್ಲವೆಂದು ಭಾವಿಸಿದ್ದೆ. ಆದರೆ ನನ್ನ ಗುರು ಜೀವನದ ಈ ಭಾಗವನ್ನು ತೋರಿಸಿಕೊಟ್ಟರು.

ಅನೇಕ ಜನರು, ದೈವಿಕ ವ್ಯಕ್ತಿಗಳು, ಋಷಿಗಳು, ಬೆಳಕಿನ ಕಾರ್ಯಕರ್ತರು ದುಷ್ಟತೆಯನ್ನು ಅಳಿಸಿಹಾಕುವ ಕೆಲಸದಲ್ಲಿ ತೊಡಗಿದ್ದಾರೆ. ನಾವು ನಮ್ಮ ಪ್ರಾಮಾಣಿಕವಾದ ರೀತಿಯಿಂದ ಇದಕ್ಕೆ ಕಾಣಿಕೆ ನೀಡುತ್ತಿದ್ದೇವೆ. ನಮ್ಮೊಳಗಿರುವ ಭ್ರಷ್ಟತೆಯ ಅಂಧಕಾರವನ್ನು, ದುರಾಸೆ, ಹಿಂಸೆ, ಸ್ವಾರ್ಥ ಇತ್ಯಾದಿಗಳನ್ನು ಅಳಿಸಿಹಾಕೋಣ.

ಪ್ರತಿಯೊಂದು ಗ್ರಹಣ ಇಡೀ ಪ್ರಪಂಚದ ಮೇಲೆ ತನ್ನ ಪ್ರಭಾವವನ್ನು ಹೊಂದಿದೆ. ಆದ್ದರಿಂದ ಗ್ರಹಣದ ಕಾಲವನ್ನು ನಾವು ಧ್ಯಾನ ಮಾಡಲು ಆರಿಸಿಕೊಂಡಿದ್ದೇವೆ. ಆಗ ಬಿಡುಗಡೆಯಾದ ಹೊಸ ಚೈತನ್ಯಗಳ ಪ್ರಯೋಜನವನ್ನು ನಾವು ಪಡೆದುಕೊಳ್ಳುತ್ತೇವೆ. ಪ್ರತಿಯೊಂದು ಗ್ರಹಣ ಸತ್ಯಯುಗದೆಡೆಗೆ ಒಂದು ಹೆಜ್ಜೆ ಎಂಬುದನ್ನು ನೆನಪಿನಲ್ಲಿಡಿ.

**19–12–2011**

ಧ್ಯಾನಗಳು ಹೆಚ್ಚು ಹೆಚ್ಚು ಕಷ್ಟವಾಗಿ ಪರಿಣಮಿಸುತ್ತಿವೆ, ಕಾರಣ ನಮ್ಮ ಪ್ರಯತ್ನಗಳು ಸಾಲದು. ಅತ್ಯಲ್ಪ ಕಾಲದಲ್ಲಿ ನಾವು ಬಹಳಷ್ಟು ಮಲಿನತೆಯನ್ನು, ಬಹಳಷ್ಟು ಕರ್ಮಗಳನ್ನು ಹೋಗಲಾಡಿಸಬೇಕಾಗಿದೆ. ಆದ್ದರಿಂದ ನಾವು ಹೆಚ್ಚಿನ ಪ್ರಯತ್ನಗಳನ್ನು ಮಾಡಬೇಕಾಗಿದೆ, ನಮ್ಮ ಪ್ರಯತ್ನಗಳನ್ನು ಅಧಿಕಗೊಳಿಸಿದರೆ, ನಮಗೆ ಹೆಚ್ಚಿನ ಸಹಾಯ ಸಿಗುತ್ತದೆ. ಕಡಿಮೆ ಪ್ರಯತ್ನದಿಂದ ಕೂಡಾ ಹೆಚ್ಚಿನ ಸಹಾಯ ಸಿಗುತ್ತದೆ. ಇದು ಋಷಿಗಳ ಕೃಪೆ.

ಒಂದು ಆಸಕ್ತಿಕರ ಅಂಶವೆಂದರೆ ಹೀಲಿಂಗ್ ಚೈತನ್ಯಗಳು ಹೀಲರ್ ಬಳಿಗೆ ಹಿಂದಿರುಗಿ ಬರುತ್ತವೆ ಮತ್ತು ರೋಗಿಯ ವೈದ್ಯಕೀಯ ಮತ್ತು ಆಧ್ಯಾತ್ಮಿಕ ಪರಿಸ್ಥಿತಿಯ ಬಗ್ಗೆ ವರದಿ ನೀಡುತ್ತವೆ. ಒಬ್ಬ ಹೀಲರ್‌ನ ಪಾತ್ರ, ಹೀಲ್ ಮಾಡುವುದೊಂದೇ ಅಲ್ಲ, ವ್ಯಕ್ತಿ ಪರಿವರ್ತನೆಯಾಗಲು ಮತ್ತು ಆಧ್ಯಾತ್ಮಿಕವಾಗಿ ಬೆಳೆಯಲು ಸಹಾಯ ಮಾಡುವುದೂ ಕೂಡ. ಹೀಲಿಂಗ್ ಒಂದು ಅದ್ಭುತ ಆಧ್ಯಾತ್ಮಿಕ ಕ್ರಿಯೆ. ಎಲ್ಲ ಹೀಲರ್‌ಗಳೂ ಈ ಭಾಗವನ್ನು ನಿರ್ಲಕ್ಷಿಸುತ್ತಾರೆ. ಅವರಿಗೆ ಈ ವಿಷಯ ತಿಳಿದಿಲ್ಲ.

ಇತ್ತೀಚೆಗೆ ನಾನು ಜ್ಯೋತಿಷಿಗಳ ಗುಂಪೊಂದನ್ನು ಭೇಟಿಯಾದೆ. ಅವರು ಎಷ್ಟು ತೆರೆದ ಮನಸ್ಸಿನವರೆಂಬುದನ್ನು ನೋಡಿ ಸ್ಥಂಭೀಭೂತನಾದೆ. ನಾನು ವಿವರಿಸಲು ಪ್ರಯತ್ನಿಸಿದುದೆಲ್ಲವನ್ನು ಅರ್ಥ ಮಾಡಿಕೊಂಡು, ಒಪ್ಪಿಕೊಳ್ಳುವಂಥವರಾಗಿದ್ದರು. ಅವರು 2012ನೇ ವರ್ಷದ ಬಗ್ಗೆಯೂ ವಿಚಾರಿಸಿದರು. ನಾನು ಇದನ್ನು ನಿರೀಕ್ಷಿಸಿರಲಿಲ್ಲ. ಇದು ಭೂಮಿಯ ಮೇಲೆ ಬಿಡುಗಡೆಗೊಂಡ ಹೊಸ ಚೈತನ್ಯಗಳು ಇನ್ನೊಂದು ನೆಲೆಯಲ್ಲಿ ತಿಳಿಸಿ ಹೇಳುವ ಮತ್ತು ಮನವರಿಕೆ ಮಾಡಿಕೊಡುವುದರ ಫಲ. ಹೊಸ ಚೈತನ್ಯಗಳ ಫಲ. ಆದ್ದರಿಂದ ಉಪದೇಶ ಅನಗತ್ಯ. ಆದರೆ ಈ ಜನಗಳ ಇಂತಹ ತೆರೆದ ಮನಸ್ಸನ್ನು ನಾನು ಬಹಳ ಮೆಚ್ಚಿಕೊಳ್ಳುತ್ತೇನೆ. ಇಂತಹ ಚೈತನ್ಯಗಳಿದ್ದರೂ ಎಲ್ಲರೂ ತೆರೆದ ಮನಸ್ಸುಳ್ಳವರಾಗಿರುವುದಿಲ್ಲ. ಆದರೆ ಈ ತಂಡದಲ್ಲಿ ಅನೇಕ ಅದ್ಭುತ ಜನರಿದ್ದಾರೆ, ಏಕೆಂದರೆ ಅವರೊಂದಿಗೆ ಒಬ್ಬ ವಿನಯವಂತ ಗುರು ಮತ್ತು ಉತ್ತಮ ಮಾರ್ಗದರ್ಶಿ ಇದ್ದರು.

ಲೈಟ್ ಚಾನಲಿಂಗ್ ಅಭ್ಯಾಸ ಮಾಡುವಾಗ ನಾವು ಉಪದೇಶ ಮಾಡುವುದಿಲ್ಲ. ಬೆಳಕು ಎಲ್ಲವನ್ನು ಮಾಡುತ್ತದೆ. ಲೈಟ್ ಚಾನಲ್ ಮಾಡುವ ಜನರು ವಿಸ್ಮಯಕಾರಿ ಅನುಭವಗಳನ್ನು, ವಿಸ್ಮಯಕಾರಿ ಪರಿವರ್ತನೆಗಳನ್ನು ಮತ್ತು ಅಂತರ್ದೃಷ್ಟಿಗಳನ್ನು ಪಡೆದಿದ್ದಾರೆ.

ಅನೇಕ ಬಾರಿ ಜನರು ಕೆಲಸ ಮಾಡಲು ಸ್ವಯಂಪ್ರೇರಿತರಾಗಿ ಬರುತ್ತಾರೆ. ನಾನು ಅವರಿಗೆ, ಮೊದಲು ಗಾಢ ಪ್ರೀತಿ, ಅಗಾಧ ಸಹನೆಗಳಿಂದ ಸಿದ್ಧಪಡಿಸಿಕೊಂಡು ನಂತರ ಕಾರ್ಯಕರ್ತರಾಗಬೇಕೆಂದು ಹೇಳುತ್ತೇನೆ. ನಾವು ಹೆಚ್ಚಿನ ಸಹನೆಯನ್ನು ಹೊಂದಿರಬೇಕು. ಋಷಿಗಳ ಬಗ್ಗೆ, ಕೆಲಸದ ಬಗ್ಗೆ ಪ್ರೀತಿ ತೋರಿಸಬೇಕು. ನೀವು ನಿಮ್ಮ ಹೃದಯದಿಂದ ಮಾತನಾಡಬೇಕು. ನಮ್ಮಲ್ಲಿ ನಿಮಗೆ ಯಾವಾಗಲೂ ಸ್ಥಾನವಿದೆ.

ಶೂನ್ಯ ಮಾಸದ ಅವಧಿಯಲ್ಲಿ ನಮ್ಮ ಋಷಿಗಳ ಜಾಗದಲ್ಲಿ ಬಂದಿರುವ ಹೊಸ ಋಷಿಗಳ ತಂಡಕ್ಕೆ ಚೈತನ್ಯಗಳನ್ನು ಅರ್ಪಿಸೋಣ. ಈ ತಂಡದ ಮುಂದಾಳು ಒಬ್ಬ ಶ್ರೇಷ್ಠ ಸ್ತ್ರೀ–ಋಷಿ. ಅವರು ಪ್ರಪ್ರಥಮ ಬಾರಿಗೆ ಬಂದಿದ್ದಾರೆ. ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಲೈಟ್ ಏಜ್ ಫೌಂಡೇಶನ್(ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

## ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಪತ್ರಗಳು

ಸಂ: ವೈಶಾಲಿ ಜೋಶಿ; ಅನು: ಸುಧಾಕರ್

ಈ ವರ್ಷ ಅನೇಕ ಅವಕಾಶಗಳಿಗೆ ಮತ್ತು ಅನುಭವಗಳಿಗೆ ತೆರೆದುಕೊಂಡಿತು. ಅವು ನನ್ನನ್ನು ಬಹುಮಟ್ಟಿಗೆ ವಿನಮ್ರಳನ್ನಾಗಿ ಮಾಡಿದವು. ಅವುಗಳಲ್ಲಿ ಅತಿ ಮುಖ್ಯವಾದುದು ಅಧ್ಯಯನ ತಂಡದಲ್ಲಿ ನನ್ನ ಹೆಸರು ಸೇರ್ಪಡೆಯಾದುದು. ನನ್ನ ಮನದಾಳದಲ್ಲುಂಟಾದ ಕೃತಜ್ಞತೆ ಮತ್ತು ಪ್ರೀತಿಯನ್ನು ಹೇಳಲು ನನ್ನಲ್ಲಿ ಪದಗಳಿಲ್ಲ. ನೀವು ನನ್ನ ಜೀವನದ ಕೇಂದ್ರವಾಗಿರುವುದರಿಂದ, ಈ ಜೀವನವನ್ನು ವಿಸ್ಮಯದಿಂದ ನೋಡುತ್ತ ಸಂಭ್ರಮಿಸುತ್ತೇನೆ ಎಂದು ನಿಮಗೆ ಆಶ್ವಾಸನೆ ನೀಡುತ್ತೇನೆ. "ಕಲಿಯಲು ಮತ್ತು ಕಲಿತದ್ದನ್ನು ಬಿಡಲು ಬೇಕಾದಷ್ಟಿವೆ" ಎಂಬ ನಿಮ್ಮ ನುಡಿಗಳನ್ನು ಸದಾ ನನ್ನ ನೆನಪಿನಲ್ಲಿ ಇಟ್ಟುಕೊಂಡಿರುತ್ತೇನೆ.

–ಪದ್ಮಜಾ ಬಾಲಾಜಿ

ಲೈಟ್ ಚಾನಲಿಂಗ್ ತಂಡದೊಂದಿಗೆ ಕೆಲಸಮಾಡಲು ಸಿಕ್ಕ ಅವಕಾಶಗಳಿಂದಾಗಿ ನನ್ನಲ್ಲುಂಟಾಗಿರುವ ವಿಶಾಲತೆಯನ್ನು ಗಮನಿಸಿದ್ದೇನೆ. ಹೆಚ್ಚು ಪ್ರಶಾಂತತೆಯನ್ನು ಅನುಭವಿಸುತ್ತಿದ್ದೇನೆ. ಎಲ್ಲರನ್ನೂ ಪ್ರೀತಿಯಿಂದ ಆದರಿಸಲು ಪ್ರಯತ್ನಿಸುತ್ತಿದ್ದೇನೆ. ಹೀಗೆ ಹಿಂದೆಂದೂ ಆಗಿರಲಿಲ್ಲ. ನನ್ನಲ್ಲಿರುವ ನಕಾರಾತ್ಮಕತೆಗಳು ನಿಧಾನವಾಗಿ ಕರಗುತ್ತಿರುವುದನ್ನು ಗಮನಿಸುತ್ತಿದ್ದೇನೆ. ಪ್ರತಿದಿನ ಶಾಲೆಯ ಮಕ್ಕಳ ಜೊತೆ ಇರುವುದು ಮತ್ತು ಅವರು ಚಾನಲ್ ಮಾಡುತ್ತಿರುವ ಬೆಳಕು, ನಾನು ಬದಲಾಗಲು ಸಹಾಯ ಮಾಡುತ್ತಿರಬಹುದು.

ನಾನು ನಿಮಗೆ ತಿಳಿಸಲಿಚ್ಛಿಸುವುದೇನೆಂದರೆ, ತಮ್ಮದೇ ಆದ ವಿಶೇಷ ಸುಗಂಧಗಳನ್ನು ಬೀರುತ್ತ, ಅರಳುತ್ತಿರುವ ವಿಧವಿಧದ ಪುಷ್ಪಗಳನ್ನೊಳಗೊಂಡ ಒಂದು ಸುಂದರ ಹೂವಿನ ತೋಟ ನಿಮಗಿದೆ. ಅದರಲ್ಲಿರುವ ಹೂಗಳು ಹೊಳೆಯುತ್ತಿರುವ ನೀರಿನಷ್ಟೇ ಪರಿಶುದ್ಧವಾಗಿವೆ. ಈ ತೋಟವನ್ನು 1988ರಿಂದಲೂ ಜೋಪಾನವಾಗಿ ಆರೈಕೆ ಮಾಡಿಕೊಂಡು ಬಂದಿದ್ದೀರಿ.

–ಪ್ರಗತಿ ರಾಜ್

18–12–2010ರಂದು ನಡೆದ ಬೃಹತ್ ಲೈಟ್ ಚಾನಲಿಂಗ್ ನಿಮಗೆ ಸಂತಸ ತಂದಿತು. ನಿಮ್ಮ ಮಿಲಿಯನ್ ಡಾಲರ್ ನಗುವನ್ನು ನೋಡಲು ಕಾಯುತ್ತಿದ್ದೆವು. ಆದರ ಬದಲು ನಾವು ಮಾಡಿದ ಖರ್ಚುಗಳನ್ನು ನಿಮಗೆ ತುಂಬಲು ಆಗದಿದ್ದುದಕ್ಕಾಗಿ ವಿಷಾದಿಸಿದಿರಿ. ಲೈಟ್ ಚಾನಲಿಂಗ್‌ಗೆ ಬೇಕಾಗಿರುವುದೆಲ್ಲವನ್ನೂ ಋಷಿಗಳು ನಮಗೆ ಕೊಡುತ್ತಿದ್ದಾರೆ. ಪ್ರತಿಯೊಬ್ಬರನ್ನೂ ಮತ್ತು ಪ್ರತಿಯೊಂದನ್ನೂ ಹೇಗೆ ಪ್ರೀತಿಸಬೇಕು ಎಂದು ನೀವು ನಮಗೆ ಕಲಿಸಿದ್ದೀರಿ. ದಯವಿಟ್ಟು ಎಂದಿಗೂ ವಿಷಾದಿಸಬೇಡಿ. ಇದು ನಮಗೆ ನೋವುಂಟುಮಾಡುತ್ತದೆ.

–ವಿ. ಮಂಜುಳ

ನಾನು ನಡೆಸಿಕೊಟ್ಟ ಪ್ರತಿಯೊಂದು ಲೈಟ್ ಚಾನಲಿಂಗ್ ಕಾರ್ಯಕ್ರಮವೂ ನನಗೆ ಹೊಸ ಒಳನೋಟಗಳು ಮತ್ತು ಕಲಿಯಬೇಕಾಗಿರುವ ಪಾಠಗಳನ್ನು ಕೊಟ್ಟಿದೆ. ಈ ಕಾರ್ಯಕ್ರಮಗಳಿಂದ ನಾನು ಹೆಚ್ಚು ಪ್ರಯೋಜನಗಳನ್ನು ಪಡೆಯುತ್ತಿದ್ದೇನೆ. ಪ್ರತಿಯೊಂದು ಸಾರಿ ನನ್ನ ಮೂಲಕ ಕೆಲಸಮಾಡಲು ಋಷಿಗಳನ್ನು ಕೇಳಿಕೊಂಡಾಗಲೂ, ಪ್ರತಿಯೊಂದು ಕಾರ್ಯಕ್ರಮವೂ ಬೇರೆ ರೀತಿಯೇ ಇರುತ್ತದೆ ಮತ್ತು ನನ್ನ ಮಾತುಗಳು ಆ ಕಾರ್ಯಕ್ರಮದಲ್ಲಿ ನೆರೆದಿರುವವರ ಅಗತ್ಯಗಳಿಗನುಸಾರವಾಗಿ ಇರುತ್ತವೆ. ಬೇರೆಯವರಿಗೆ ಸಹಾಯಮಾಡಲು ಮತ್ತು ಅತ್ಯಂತ ನಮ್ರತೆಯಿಂದ, ಪ್ರೀತಿಯಿಂದ ನಾವು ವಿಕಾಸಗೊಳ್ಳಲು, ನಮ್ಮ ಜೀವನ ಒಂದು ಅತಿ ದೊಡ್ಡ ಅವಕಾಶ ಎಂದು ಕಲಿಸಿಕೊಟ್ಟ ನಿಮಗೆ ಮತ್ತು ಋಷಿಗಳಿಗೆ ನನ್ನ ಧನ್ಯವಾದಗಳು.

–ನಿತ್ಯಾ ಜೇಮ್ಸ್

ನಾನು ಹೀಲಿಂಗ್ ಗುಂಪಿಗೆ ಸೇರಿ, ಬೆಳಕನ್ನು ಕಳುಹಿಸಲು ಪ್ರಾರಂಭ ಮಾಡಿದಾಗಿನಿಂದ, ನಾನು ಹೆಚ್ಚು ಚೈತನ್ಯದಿಂದ ತುಂಬಿದ್ದೇನೆ. ನಾನು ಮಾಡುವ ಹೀಲಿಂಗ್ ಮತ್ತು ರೇಖಿ ಕೂಡ ಹೆಚ್ಚು ಪ್ರಭಾವಶಾಲಿಯಾಗಿವೆ ಮತ್ತು ಅದ್ಭುತ ಫಲಿತಾಂಶಗಳನ್ನು ಕೊಟ್ಟಿವೆ ಏಕೆಂದರೆ ಋಷಿಗಳು ನಮ್ಮ ಜೊತೆ ಇದ್ದಾರೆ. ನನ್ನನ್ನು ಈ ಗುಂಪಿಗೆ ಸೇರಿಸಿಕೊಂಡಿದ್ದಕ್ಕಾಗಿ ನನ್ನ ಹೃದಯಾಂತರಾಳದಿಂದ ನಿಮಗೆ ವಂದಿಸುತ್ತೇನೆ.

–ಹಿಲ್ಲಾ ಮಜ಼್ದಾ

ಸಾಧಕಿಯಾಗಿ ನಾನು ಕೂಡಾ ತಪ್ಪು ಮಾಡುತ್ತೇನೆ, ಈಗಲೂ ಕೆಲವೊಮ್ಮೆ ತಾಳ್ಮೆ ಕಳೆದುಕೊಳ್ಳುತ್ತೇನೆ, ಆದರೂ ನೀವು ಯಾವಾಗಲೂ ನನ್ನೊಂದಿಗಿದ್ದೀರಿ... ಇದು ಯಾವ ಷರತ್ತೂ ಇಲ್ಲದ, ಭದ್ರವಾದ ಆಧಾರ. ಇದನ್ನೇ ನಾನು ನನ್ನಲ್ಲಿ ಬೆಳೆಸಿಕೊಳ್ಳಲು ಪ್ರಯತ್ನಿಸುತ್ತಿರುವುದು. ಸಾಧಕಿಯಾಗಿ ನಾನು ಇನ್ನೊಬ್ಬರಿಗಾಗಿ ಲಭ್ಯವಿರುವುದು ಮತ್ತು ಆ ವ್ಯಕ್ತಿ ಹೇಗಿದ್ದರೂ ಸರಿ, ನಾನು ಅವರಿಗೆ ಒಳ್ಳೆಯವಳಾಗಿರುವುದು.

–ಗೀತಾ ಜೋಶಿ

ನಮ್ಮ ಭೂಮಿಯನ್ನು ಪೂರ್ಣವಾಗಿ ಪರಿವರ್ತಿಸುವುದಕ್ಕೆ ಕಾರಣವಾಗಿರುವ ಬೋಧನೆಗಳು, ಚೈತನ್ಯಗಳು ಮತ್ತು ಪ್ರೀತಿಯ ಪರಿಚಯ ಮಾಡಿಕೊಳ್ಳಲು ಒಪ್ಪಿಗೆ ಕೊಟ್ಟಿದ್ದಕ್ಕಾಗಿ, ಈ ಹೊಸವರ್ಷದ ಆರಂಭದ ಸಮಯದಲ್ಲಿ ನನ್ನ ಕೃತಜ್ಞತೆಗಳನ್ನು ವ್ಯಕ್ತಪಡಿಸುತ್ತೇನೆ. ಈ ಪರಿವರ್ತನೆಗೆ ಬೇಕಾದ ನಂಬಿಕೆ, ಭರವಸೆ, ದೃಢನಿಷ್ಠೆಗಳು ನಿಮ್ಮಿಂದಾಗಿ ನನ್ನಲ್ಲಿ ಪ್ರಚೋದನೆಯಾಗುತ್ತಿವೆ. ಗುರಿಯ ಹಾದಿಯಲ್ಲಿ, ವಿವಿಧತೆಯಲ್ಲಿ ಏಕತೆಯನ್ನು ಅರ್ಥಮಾಡಿಕೊಳ್ಳುತ್ತಿದ್ದೇನೆ. ಮಾರ್ಗದರ್ಶನ ನೀಡುವಲ್ಲಿನ ನಿಮ್ಮ ಧೈರ್ಯಕ್ಕೆ, ತಾಳ್ಮೆಗೆ ಮತ್ತು ನಿಮ್ಮ ಮಾದರಿ ಜೀವನಕ್ಕಾಗಿ ವಂದನೆಗಳು.

–ಹರ್ಡಾ ಲೇಟನ್

## ಪ್ರಶ್ನೆಗಳು ಮತ್ತು ಉತ್ತರಗಳು

**(ಸಂಗ್ರಹ: ಶೋಭಾ ಕೆ. ರಾವ್; ಅನು: ಉಷಾ ವಾಸನ್)**

**ಪ್ರ: ಪ್ರಜ್ಞಾಶೂನ್ಯ(ಕೋಮಾ) ಸ್ಥಿತಿಯಲ್ಲಿರುವ ವ್ಯಕ್ತಿ ತನ್ನ ಪ್ರಜ್ಞೆಯನ್ನು ಉಳಿಸಿಕೊಂಡು ಸುತ್ತ ನಡೆಯುವ ಘಟನೆಗಳನ್ನು ತಿಳಿಯಬಹುದೇ?**

ಉ: ಹೌದು. ಆತನಿಗೆ ತನ್ನ ಸುತ್ತ ನಡೆಯುವ ಘಟನೆಗಳ ಅರಿವು ಬೇರೆಯೇ ಸ್ತರದಲ್ಲಿ ಇರುತ್ತದೆ. ಮೆದುಳು ತಾತ್ಕಾಲಿಕವಾಗಿ ಮನಸ್ಸಿನಿಂದ ಸಂಪರ್ಕ ಕಳೆದುಕೊಂಡಿರುತ್ತದೆ. ಅದರಿಂದಾಗಿ, ಆತನಿಗೆ ಈ ಸ್ತರದ ಅರಿವಿರುವುದಿಲ್ಲ. ಆದರೆ, ಆತನ ಆತ್ಮಕ್ಕೆ ಇಲ್ಲಿ ನಡೆಯುವ ಎಲ್ಲಾ ಘಟನೆಗಳ ಅರಿವಿರುತ್ತದೆ.

**ಪ್ರ: ಪ್ರಜ್ಞಾಶೂನ್ಯ(ಕೋಮಾ) ಸ್ಥಿತಿಯಲ್ಲಿರುವ ವ್ಯಕ್ತಿಯ ದೇಹವನ್ನು ಒಂದು ವಾಕ್-ಇನ್ ಪ್ರವೇಶಿಸಬಹುದೇ?**

ಉ: ಇಲ್ಲ. ವ್ಯಕ್ತಿ ಈ ಸ್ತರದಲ್ಲಿ ಮಾತ್ರ ಪ್ರಜ್ಞಾಶೂನ್ಯನಾಗಿರುತ್ತಾನೆ, ಆದರೆ ಅವನ ಆತ್ಮಕ್ಕೆ ಎಲ್ಲಾ ಘಟನೆಗಳ ಅರಿವಿರುತ್ತದೆ. ಒಂದು ವಾಕ್-ಇನ್, ಆತ್ಮದ ಅನುಮತಿಯಿಲ್ಲದೆ ದೇಹವನ್ನು ಪ್ರವೇಶಿಸಲಾಗದು.

**ಪ್ರ: ಏಸುಕ್ರಿಸ್ತ ಅಥವಾ ಕೃಷ್ಣನ ಬದುಕನ್ನು ಛಾಪು ಮಾಡಲು ಅನುಮತಿ ಇದೆಯೇ?**

ಉ: ಹೌದು. ಆದರೆ, ಸಾಮಾನ್ಯ ಆತ್ಮಗಳಿಗೆ ಈ ಛಾಪುಗಳನ್ನು ಹೊಂದಲು ಸಾಧ್ಯವಿಲ್ಲ, ಏಕೆಂದರೆ ಆ ಛಾಪು ತುಂಬಾ ಅಥವಾ ಅತಿ ದೊಡ್ಡದಾಗಿರುತ್ತದೆ.

**ಪ್ರ: ಗಂಡಸರ ಬದುಕನ್ನು ಹೆಂಗಸರ ಸೂಕ್ಷ್ಮ ಶರೀರಗಳ ಮೇಲೆ ಛಾಪು ಮಾಡಬಹುದೇ?**

ಉ: ಸಾಮಾನ್ಯವಾಗಿ ಆತ್ಮಗಳು ಇದನ್ನು ಇಷ್ಟಪಡುವುದಿಲ್ಲ. ಗಂಡಸು ಒಬ್ಬ ಗಂಡಸಿನ ಅನುಭವದ ಛಾಪನ್ನೇ ಬಯಸುತ್ತಾನೆ. ಅಲ್ಲದೆ, ಇದರ ಅವಶ್ಯಕತೆಯಿಲ್ಲ.

**ಪ್ರ: ಯುವಕ ಮತ್ತು ವಯಸ್ಸಾದ ಆತ್ಮಗಳೆಂಬ ಪ್ರಭೇದಗಳಿವೆಯೇ?**

ಉ: ಇಲ್ಲ. ಆತ್ಮಗಳಿಗೆ ವಯಸ್ಸಾಗುವುದಿಲ್ಲ. ಆದರೆ ಸೂಕ್ಷ್ಮ ಶರೀರಗಳಿಗೆ ನಿಧಾನವಾಗಿ ವಯಸ್ಸಾಗುತ್ತದೆ.

**ಪ್ರ: ಆಧ್ಯಾತ್ಮಿಕ ಪ್ರಗತಿಗೆ ನೋವನ್ನು ಅನುಭವಿಸುವುದು ಅವಶ್ಯವಿದೆಯೇ?**

ಉ: ಆಧ್ಯಾತ್ಮಿಕ ಪ್ರಗತಿಗೆ ನೋವು-ಸಂಕಷ್ಟಗಳನ್ನು ಅನುಭವಿಸುವ ಅಗತ್ಯವಿಲ್ಲ. ಆದರೆ ನೋವು-ಸಂಕಷ್ಟಗಳು ಹಲವು ವಿಧದಲ್ಲಿ ಸಹಾಯ ಮಾಡುತ್ತವೆ. ನೋವು ನಮಗೆ ನಮ್ರತೆಯನ್ನು ಕಲಿಸುತ್ತದೆ. ಅದು ಇನ್ನೊಬ್ಬರ ನೋವು ಮತ್ತು ಸಮಸ್ಯೆಗಳನ್ನು ತಿಳಿದುಕೊಳ್ಳುವಲ್ಲಿ ಸಹಾಯ ಮಾಡುತ್ತದೆ, ಜೀವನದಲ್ಲಿ ಉನ್ನತ ಮಟ್ಟದಿಂದ ವ್ಯವಹರಿಸಲು ಕಲಿಸುತ್ತದೆ. ನೋವು-ಸಂಕಷ್ಟ ಅಂತರ್ಮುಖಿಯಾಗಲು ಸಹಾಯವಾಗುತ್ತದೆ ಮತ್ತು ಈ ಸ್ತರದ ಚಟುವಟಿಕೆಗಳು ಹಾಗೂ ಸಂಬಂಧಗಳನ್ನು ಕಳೆದುಕೊಳ್ಳುವಲ್ಲಿ ಸಹಾಯವಾಗುತ್ತದೆ. ನೋವು-ಸಂಕಷ್ಟ ಆಧ್ಯಾತ್ಮಿಕವಾಗಲು ಸಹಾಯವಾಗುತ್ತದೆ. ಅದು ನಮ್ಮ ಸಹನೆಯ ಮಟ್ಟವನ್ನು ಹೆಚ್ಚಿಸುತ್ತದೆ.

**ಪ್ರ: ನಾವು ಪ್ರಪಂಚದೊಂದಿಗೆ ಹೇಗೆ ವ್ಯವಹರಿಸಬೇಕು?**

ಉ: ಅದಕ್ಕೆ ಹಲವು ದಾರಿಗಳಿವೆ. ನಾವು ನಮ್ಮ ವಿವೇಕ ಮತ್ತು ಅಂತರ್-ಗ್ರಹಿಕೆಯನ್ನು ಉಪಯೋಗಿಸಬೇಕು. ನಾವು ಪ್ರತಿಯೊಂದು ಸನ್ನಿವೇಶ, ಪ್ರತಿಯೊಬ್ಬ ವ್ಯಕ್ತಿಯನ್ನು ಅಭ್ಯಸಿಸಿ ನಂತರ ವ್ಯವಹರಿಸಬೇಕು. ನಾವು ತೆರೆದ ಮನಸ್ಸುಳ್ಳವರಾದರೆ, ಸದಾ ಪ್ರೀತಿಯನ್ನು ಹೊಂದಿದ್ದರೆ ಮತ್ತು ಎಚ್ಚರಿಕೆಯಿಂದಿದ್ದರೆ ಇದು ಕಷ್ಟವೇನಲ್ಲ.

**ಪ್ರ: ನಾವು ಧ್ಯಾನ ಮಾಡುವಾಗ, ನಮ್ಮ ಈ ಶಾರೀರಿಕ ವ್ಯವಸ್ಥೆಯಲ್ಲಿ ಯಾರು ಧ್ಯಾನ ಮಾಡುತ್ತಾರೆ?**

ಉ: ನಮ್ಮ ಇಡೀ ಶಾರೀರಿಕ ವ್ಯವಸ್ಥೆ ಧ್ಯಾನ ಮಾಡುತ್ತದೆಂದು ಹೇಳಬಹುದು. ಧ್ಯಾನ, ದೇಹವನ್ನು ಮೌನಗೊಳಿಸುವುದರಿಂದ ಹಿಡಿದು ಸಮಾಧಿಯನ್ನು ಅನುಭವಿಸುವವರೆಗಿನ ಒಂದು ಸರಣಿ ಪ್ರಕ್ರಿಯೆ.

**ಪ್ರ: ಕೆಲವೊಮ್ಮೆ ಧ್ಯಾನ ಮಾಡಲು ಕಷ್ಟವಾಗುವುದಕ್ಕೆ ನಮ್ಮ ಕರ್ಮಗಳು ಕಾರಣವೇ?**

ಉ: ನಾವು ಹಾಗೆ ಹೇಳಬಹುದು. ಕೆಲವೊಮ್ಮೆ ಕರ್ಮಗಳು ಧ್ಯಾನ ಮಾಡಲು ಅಡ್ಡಬರಬಹುದು. ಆದರೆ ಹೆಚ್ಚು ಬಾರಿ ನಮ್ಮ ಆಲಸ್ಯ ಮತ್ತು ಬೇಜವಾಬ್ದಾರಿ ಕಾರಣವಾಗಿದೆ.

**ಪ್ರ: ನನಗೆ ಧ್ಯಾನದ ತಂತ್ರವನ್ನು ಅಭ್ಯಾಸ ಮಾಡಲು ಕಷ್ಟವಾಗುತ್ತದೆ. ನಾನು ತಂತ್ರಗಳನ್ನು ಬಿಟ್ಟು ಮೌನವಾಗಿ ಸುಮ್ಮನೆ ಕುಳಿತುಕೊಳ್ಳಬಹುದೇ?**

ಉ: ಸುಮ್ಮನೆ ಮೌನವಾಗಿ ಕುಳಿತುಕೊಳ್ಳುವುದು ಧ್ಯಾನವಲ್ಲ. ನಿಮಗೆ ಧ್ಯಾನ ಮಾಡಬೇಕೆಂದಿದ್ದರೆ ನೀವು ತಂತ್ರವನ್ನು ಅಭ್ಯಾಸ ಮಾಡಲೇಬೇಕು. ■

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| 2012 - End or Beginning | 100/- |
| iGuruji - Vol 1 | 150/- |
| iGuruji - Vol 2 | 120/- |
| iGuruji - Vol 3 | 150/- |
| Higher Communication & Other Realities | 100/- |
| Living in the Light of My Guru | 220/- |
| How to Meditate | 50/- |
| Dhyana Yoga | 50/- |
| Descent of Soul | 50/- |
| Practising Shambala Principles | 50/- |
| Astral Ventures of A Modern Rishi | 50/- |
| Channelled Knowledge from the Rishis | 250/- |
| Channelled Knowledge from the Rishis-Vol-2 | 150/- |
| Guruji Speaks Part - I | 200/- |
| Guruji Speaks Part - II | 200/- |
| Guruji Speaks Vol - 3 | 150/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿನ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ-ಗುರೂಜಿ ಭಾಗ 1 | 150/- |
| ಐ-ಗುರೂಜಿ ಭಾಗ 2 | 120/- |
| ಉನ್ನತ ಸಂಪರ್ಕಗಳು | 100/- |
| ಅನಿಸಿಕೆಗಳು | 120/- |
| 2012 ಅಂತ್ಯ ಅಥವಾ ಆರಂಭ | 100/- |
| ಧ್ಯಾನ ಮಾಡುವುದು ಹೇಗೆ | 50/- |
| ಧ್ಯಾನ ಯೋಗ | 50/- |
| ಆತ್ಮದ ಅವರೋಹಣ | 50/- |
| ಶಂಬಲ ನಿಯಮಗಳ ಅಭ್ಯಾಸ | 50/- |
| ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | 50/- |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ಬೆಳಕು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಅನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| २०१२ – अंत की आरंभ? (Marathi) | 100/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्त्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| प्रकाश (Marathi) | 10/- |
| उच्चस्तरीय संवाद आणि इतर सत्ये (Marathi) | 100/- |
| ध्यान कैसे करे (Hindi) | 50/- |
| ध्यान-योग (Hindi) | 50/- |
| प्रकाश (Hindi) | 10/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| 2012 முடிவா அல்லது தொடகமா | 100/- |
| ஒளியில் வாழ்க்கை | 10/- |
| ஒளி | 10/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| వెలుగులో జీవించడం | 10/- |
| కాంతి | 10/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. Posted at Bangalore GPO No. of Pages-8



ಗುರೂಜಿ ಕೃಷ್ಣಾನಂದ (1939)

## ಮಾನಸ ಫೌಂಡೇಶನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಶನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು. 80-G ನಿಯಮದಡಿ ಆದಾಯ ತೆರಿಗೆಯ ರಿಯಾಯಿತಿ ಇದೆ.)

# ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಶೋಭಾ ಕೆ. ರಾವ್; ಅನು: ಸ್ವರ್ಣಲತ)

2009ರ ಅಕ್ಟೋಬರ್‌ನಲ್ಲಿ ನನ್ನ ಸ್ನೇಹಿತರೊಬ್ಬರು ತಪೋನಗರದ ಬಗ್ಗೆ ಹಾಗೂ ಅಂತರ ಮಾನಸದಲ್ಲಿರುವ ಮಹರ್ಷಿ ವಿಶ್ವಾಮಿತ್ರರ ಬಗ್ಗೆ ನನ್ನನ್ನು ಹೇಳಿದರು. ಮಹರ್ಷಿ ವಿಶ್ವಾಮಿತ್ರರನ್ನು ನೋಡಬೇಕೆಂಬ ತೀವ್ರ ಹಂಬಲದಿಂದ ಅವರ ಬಗ್ಗೆ ಯೋಚಿಸುತ್ತಿದ್ದಾಗ ಒಂದು ರೂಪ ನನ್ನ ಕಣ್ಣಮುಂದೆ ಬಂದಿತು. ನಂತರ 31-1-2010ರಂದು ಅಂತರಮಾನಸಕ್ಕೆ ಭೇಟಿನೀಡಿದಾಗ, ಅಲ್ಲಿ ಅದೇ ಮೂರ್ತಿಯನ್ನು ನೋಡಿ ನಾನು ರೋಮಾಂಚನಗೊಂಡೆ.

–ಬಿ.ಟಿ. ಭಾಗ್ಯವತಿ

ಕೆಲವು ದಿನಗಳ ಹಿಂದೆ ನನ್ನ ಸ್ನೇಹಿತರೊಡನೆ ಮಾತನಾಡುತ್ತಿದ್ದಾಗ, ತಕ್ಷಣ ನಾನಲ್ಲದ ಬೇರಾರೋ ನನ್ನೊಳಗಿರುವ ಅರಿವಾಯಿತು. ಅದು ತನ್ನದೇ ಆದ ಅಭಿರುಚಿ ಹೊಂದಿದ್ದು, ನನ್ನನ್ನು ಸ್ವಾರ್ಥದಿಂದ ಕೂಡಿರುವ ಅನುಭವಗಳನ್ನು ಹೊಂದುವಂತೆ ಸಲಹೆ ನೀಡಿತು. ಆಗ ನನ್ನೊಳಗೆ ಮತ್ತಾರೋ ಅಳುತ್ತಾ, ಮತ್ತೆ ಮತ್ತೆ ನಾನಾರೆಂದು ಕೇಳುತ್ತಿರುವಂತೆನಿಸಿತು. ನಂತರ ನಾನು ಮತ್ತು ಎಲ್ಲವೂ ಕರಗಿಹೋಗಿ, ಎಲ್ಲವೂ ಮತ್ತು ಎಲ್ಲದರಲ್ಲೂ ನಾನೇ ಇರುವ ಅನುಭವದಿಂದ ಕಣ್ಣಲ್ಲಿ ನೀರು ಬಂದಿತು. ತಕ್ಷಣ ನಾನೊಂದು ಶಾಂತವಾದ, ಕತ್ತಲೆಯ ಗುಹೆಯಲ್ಲಿದ್ದೆ. ನಾನು ಕಣ್ತೆರೆದ ಕೆಲವು ಕ್ಷಣಗಳವರೆಗೆ ಏನೂ ತೋಚಲಿಲ್ಲ.

– ಹೇಮಂತ್ ಶರ್ಮಾ

ನಾನು ತರಗತಿಯೊಳಗೆ ಪ್ರವೇಶಿಸಿದೊಡನೆಯೇ ಋಷಿಗಳೊಡನೆ ಹಾಗೂ ಗುರೂಜಿಯವರೊಡನೆ ಸಂಪರ್ಕ ಹೊಂದಿ ನನ್ನ ಚೈತನ್ಯದ ಮಟ್ಟ ಬದಲಾವಣೆಯಾದ ಅನುಭವವಾಯಿತು. ನಾನು ನಿಶ್ಚಲಳಾದೆ. ಆ ನಿಶ್ಚಲ ಸ್ಥಿತಿಯ ಆಳದಿಂದ ಪ್ರೀತಿ ಹಾಗೂ ದಯೆಯಿಂದ ತುಂಬಿದ ಒಂದು ಧ್ವನಿ ಕೇಳಿಸಿತು. ಅದು ಋಷಿಗಳು ಹಾಗೂ ಗುರೂಜಿಯವರು ಪ್ರತಿಯೊಬ್ಬರಿಗೂ ತೋರಿಸುವ ಪ್ರೀತಿ ಹಾಗೂ ದಯೆ ಎಂದು ನಾನು ಗುರುತಿಸಿದೆ.

–ರಾಜಲಕ್ಷ್ಮಿ

ಒಂದು ಮಗುವನ್ನು MRI ಸ್ಕ್ಯಾನ್‌ಗೆ ಕರೆದುಕೊಂಡು ಹೋಗುವ ಮೊದಲು ಮಗು ನಿದ್ದೆ ಮಾಡುವುದು ಅವಶ್ಯಕವಾಗಿತ್ತು. ನಿದ್ರೆ ಬರಿಸುವ ಔಷಧದಿಂದಲೂ ಮಗುವಿಗೆ ನಿದ್ದೆ ಬರಲಿಲ್ಲ, ಆದ್ದರಿಂದ ಅರಿವಳಿಕೆ ಮದ್ದನ್ನು ಕೊಡಬೇಕೆಂದು ವೈದ್ಯರು ತೀರ್ಮಾನಿಸಿದರು. ನಾನು ಮಗುವಿನ ಆತ್ಮದೊಡನೆ ಸಂಪರ್ಕ ಕಲ್ಪಿಸಿಕೊಂಡು 'ನೀನು ಈಗ ನಿದ್ದೆ ಮಾಡದಿದ್ದರೆ ನಿನಗೆ ಅರಿವಳಿಕೆ ಮದ್ದು ಕೊಡುತ್ತಾರೆ. ಅದರಿಂದ ನಿನಗೆ ತೊಂದರೆಯಾಗುತ್ತದೆ. ಸ್ವಲ್ಪಹೊತ್ತು ನಿದ್ದೆ ಮಾಡು' ಎಂದು ಹೇಳಿದೆ. ನಂತರ ಕೆಲವು ನಿಮಿಷಗಳೊಳಗೇ ಮಗು ನಿದ್ದೆ ಮಾಡಿತು!

– ಧನಶ್ರೀ ಕುಲಕರ್ಣಿ

ಕೆಲವು ದಿನಗಳ ಹಿಂದೆ ನಾನು ಬೆಳಕಿನ ಸಾಗರದೊಡನೆ ವಿಲೀನಗೊಳ್ಳಬೇಕೆಂದು ಪ್ರಯತ್ನಿಸಿದಾಗ, ನನ್ನ ಸೂಕ್ಷ್ಮಶರೀರ ಒಂದು ಚಿಕ್ಕ ಬೆಳಕಿನ ಗೋಳವಾಗಿ ಬೆಳಕಿನ ಸಾಗರದೊಡನೆ ವಿಲೀನಗೊಂಡಿತು. ಆ ಕ್ಷಣ ನನಗೆ ನನ್ನ ಪ್ರಜ್ಞೆಯಲ್ಲಾದ ಬದಲಾವಣೆ ತಿಳಿಯಿತು. ನಾನು ಪ್ರಜ್ಞೆಯ ಆಳವಾದ ಪದರದಲ್ಲಿದ್ದರೂ, ನನಗೆ ನನ್ನ ದೇಹ ಹಾಗೂ ಸುತ್ತಮುತ್ತಲಿನ ಅರಿವಿತ್ತು. ಈ ಅನುಭವದ ನಂತರ ನಾನು ಆಧ್ಯಾತ್ಮಿಕವಾಗಿ ಶಕ್ತಿಯುತವಾಗಿದ್ದೇನೆ ಮತ್ತು ಶಾಂತಿಯಿಂದಿದ್ದೇನೆ.

–ಮನೋಜ್ ಚೋಪ್ರಾ

ಕೆಲವು ದಿನಗಳಿಂದ ನಾನು ಧ್ಯಾನದ ಜೊತೆಯಲ್ಲಿ ಏಕತೆಯ ಅಭ್ಯಾಸವನ್ನು ಪ್ರಾರಂಭಿಸಿದ್ದೇನೆ. ಈಗ ನನ್ನ ಸುತ್ತ ಇರುವವರು ನೋವನ್ನು ಅಥವಾ ತೊಂದರೆಯನ್ನು ಅನುಭವಿಸಿದರೆ, ನನಗೂ ಅದರ ಅನುಭವವಾಗುತ್ತದೆ. ಇದು ನನ್ನ ಹತ್ತಿರದವರಿಗೆ ಮಾತ್ರ ಸೀಮಿತವಾಗಿಲ್ಲ.

– ಮೇಧಾ ಕುಲಕರ್ಣಿ

ನನ್ನ ಧ್ಯಾನದಲ್ಲಿ ಗುರೂಜಿಯವರು ಕನಕದಾಸರಾಗಿರುವ ಒಂದು ದೃಶ್ಯವನ್ನು ಕಂಡೆ! ನಂತರ ಗುರೂಜಿಯವರ ಜಾಗದಲ್ಲಿ ಒಬ್ಬ ಋಷಿಯನ್ನು ನೋಡಿದೆ. ಆಮೇಲೆ ಗುರೂಜಿಯವರು ಆಂಗೀರಸ ಋಷಿ ಎಂಬ ಉತ್ತರ ಬಂತು. ಈ ವಿಶನ್‌ನಿಂದ ನಾನು ಅತ್ಯಂತ ವಿನೀತನಾದೆ.

– ಪ್ರತಾಪ್ ಕಿಶನ್

ನನ್ನ ಧ್ಯಾನದಲ್ಲಿ ಮೂರನೇ ಕಣ್ಣಿನಲ್ಲಿ ತೀಕ್ಷ್ಣವಾದ ಮತ್ತು ಒಂದೇ ಕಡೆ ಕೇಂದ್ರೀಕೃತವಾದ ಬೆಳಕಿನ ಕಿರಣದ ಕಂಪನ ಉಂಟಾದುದರಿಂದ, ನನಗೆ ಸೂಕ್ಷ್ಮ ಕಾರ್ಯಗಳನ್ನು ನೋಡಲು ಹಾಗೂ ಜೊತೆಯಲ್ಲೇ ನನ್ನ ಅಂತರಾಳದಲ್ಲಿ ಕೇಂದ್ರೀಕೃತಗೊಳ್ಳಲು ಸಾಧ್ಯವಾಯಿತು. ಈಗ ನನಗೆ ನೇರವಾಗಿ ಅಂತರಾಳದ ದೈವತ್ವಕ್ಕೆ ಇಳಿಯಲು ಸಾಧ್ಯವಾಗಿದೆ. ಯಾವುದೋ ಒಂದು ಸಮಯದಲ್ಲಿ ಅದು ನನ್ನನ್ನು ಸ್ವಪ್ರಯತ್ನವಿಲ್ಲದೆ ಆ ಕೇಂದ್ರದೊಡನೆ ಸೇರಿಸಿ, ಬೇಡವಾದ ಯೋಚನೆಗಳನ್ನು ಮತ್ತು ಭಾವನೆಗಳನ್ನು ಕರಗಿಸಿ, ನನ್ನ ಅಸ್ತಿತ್ವದೊಡನಿರುವಂತೆ ಮಾಡುತ್ತದೆ.

–ವಿದ್ಯಾ ವಿಶ್ವಾಮಿತ್ರ

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/-
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077. ಮಾನಸ ಫೌಂಡೇಶನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಪ್ರಕಾಶನ ಸ್ಥಳ ಮಾನಸ ಫೌಂಡೇಶನ್ (ರಿ.), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು-ಬಾಗಲೂರು ರೋಡ್) ಬೆಂಗಳೂರು ಅರ್ಬನ್ - 560 077
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು - 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ